ಶ್ರೀ ಸಿದ್ದು ಸವದಿ (ತೇರದಾಳ) :- ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ :-

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :- ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 16ನೇ ತಾರೀಖಿನಂದು ಘನತೆವೆತ್ತ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿರುವ ಭಾಷಣದಲ್ಲಿ ಅವರು ಕೊಟ್ಟಿರುವ ವ್ಯವಸ್ಥೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ತಮ್ಮ ಅನುಮತಿ ಕೋರುತ್ತಿದ್ದೇನೆ.

ಮೊನ್ನೆ ಚುನಾವಣೆ ನಡೆದ ನಂತರ, ಈ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಕರ್ನಾಟಕದ ಜನತೆ ಅಧಿಕಾರ ಕೊಟ್ಟ ನಂತರ, ಚುನಾವಣಾ ಪೂರ್ವದಲ್ಲಿ ನಮ್ಮ ನಾಯಕರಾದ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು, ನಮ್ಮ ಸರ್ಕಾರ ಬಂದರೆ ಜನತೆಗೆ ಪ್ರಣಾಳಿಕೆಯಲ್ಲಿ ಏನು ಘೋಷಿಸಿದ್ದೆವು, ಆ ರೀತಿ ಘೋಷಣೆ ಮಾಡಿರುವ ರೀತ್ಯಾ ಶೇಕಡ 60ರಿಂದ 70ರಷ್ಟು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಅದರಲ್ಲಿ ಬಹಳ ಪ್ರಮುಖವಾಗಿರುವುದು ಹಾಗೂ ಸಮಸ್ಯೆ ಇರುವುದೇನೆಂದರೆ, ಈ ದಿನ ಮಾನ್ಯ ಸದಸ್ಯರಾದ ಜಯಚಂದ್ರರವರು ಗಣಿ ಉದ್ಯಮದ ಬಗ್ಗೆ ಬಹಳಷ್ಟು ಬೆಳಕು ಚೆಲ್ಲಿದ್ದಾರೆ. ಅವರ ಭಾವನೆ ಇಷ್ಟೆ. ಈ ರಾಜ್ಯದ ಯಾವುದೇ ಒಂದು ಖನಿಜ ಹಾಗೂ ರಾಜ್ಯಕ್ಕೆ ಬರುವ ಸವಲತ್ತು ಏನಿದೆ, ಅದರಿಂದ ರಾಜ್ಯ ವಂಚಿತವಾಗಬಾರದೆಂದು ಅವರು ಭಾವನೆ ವ್ಯಕ್ತಪಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದರಲ್ಲಿ ಒಂದೇ ಒಂದು ವಿಷಯವನ್ನು ನಾವು ಗಮನಿಸಬೇಕಾಗುತ್ತದೆ. ಏನೆಂದರೆ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ನಂತರ ಗಣಿಗಾರಿಕೆಗೆ ಸಂಬಂಧಿಸಿದಂತೆ ಒಂದೇ ಒಂದು ಮಂಜೂರಾತಿಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಶ್ರೀ ಕೆ.ಜೆ.ಬೋಪಯ್ಯ, ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆ ರೀತಿ ಅನುಮತಿ ಕೊಡದಿದ್ದ ಮೇಲೆ ಇದರಲ್ಲಿ ನಮ್ಮ ಪಾಲುದಾರಿಕೆ ಏನಿದೆ? ಇವತ್ತು ಪ್ರಾಮಾಣಿಕವಾದ ಸತ್ಯವನ್ನು ಈ ಸದನದ ಮುಂದೆ ಇಡಲು ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಈ ನಾಡಿನ ಮುಖ್ಯಮಂತ್ರಿಗಳಾಗಿ ಏನು ಗಣಿ ವ್ಯವಹಾರದಲ್ಲಿ ಸೋರಿಕೆಯಾಗುತ್ತಿತ್ತೋ ಅದರಲ್ಲಿ ನೂರಕ್ಕೆ 90-95 ಪರ್ಸೆಂಟ್ ತಡೆದಿದ್ದಾರೆ. ನಮ್ಮ ಚಿತ್ರದುರ್ಗ ಮತ್ತು ಬಳ್ಳಾರಿ ಭಾಗಗಳಲ್ಲಿ ಓಡಾಡುತ್ತಿದ್ದ ಸಾವಿರಾರು ಲಾರಿಗಳಿಗೆ ಇವತ್ತು ಕೆಲಸ ಇಲ್ಲದಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ಮೇಲೆ ಏನು ಕಳ್ಳಸಾಗಾಣಿಕೆಗೆ ಆಗುತ್ತಿತ್ತು ಅಂತಹ ಗಣಿಗಾರಿಕೆಯನ್ನು ನೂರಕ್ಕೆ ತೊಂಭತ್ತೈದರಷ್ಟು ನಿಲ್ಲಿಸಿರತಕ್ಕದನ್ನು ನಾವು ಗಮನಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ, ಮಾನ್ಯ ವಿರೋಧ ಪಕ್ಷದವರಲ್ಲಿ ನನ್ನ ಮನವಿ ಏನೆಂದರೆ ಇವತ್ತು ನಾವು ನೀವು ಸೇರಿ ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಚಿಂತನೆ ಮಾಡಬೇಕು. ಅದು ಬಿಟ್ಟು ಯಾರು ಪ್ರಾಮಾಣಿಕವಾಗಿ ಈ ಗಣಿ ಉದ್ಯಮವನ್ನು ಮಟ್ಟಹಾಕಿ ಇಲ್ಲಿ ಆಗುತ್ತಿದ್ದ ಸೋರಿಕೆಯನ್ನು ತಡೆಗಟ್ಟಿರುವ ಈ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಇಷ್ಟೊಂದು ಹಂತಕ್ಕೆ ಹೋಗಿರುವುದನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಈ ರಾಜ್ಯಕ್ಕೆ ಬಹಳ ಮುಖ್ಯವಾಗಿ ದೊಡ್ಡ ಸಮಸ್ಯೆ ತಲೆದೋರಿರತಕ್ಕದ್ದು ವಿದ್ಯುತ್ ಸಮಸ್ಯೆ. ಈ ವಿದ್ಯುತ್ ಸಮಸ್ಯೆಯನ್ನು ನಮ್ಮ ರಾಜ್ಯ ಮತ್ತು ರೈತರು ಏನು ಎದುರಿಸುತ್ತಿದ್ದಾರೆ, ಈ ಪರಿಸ್ಥಿತಿ ಉದ್ಭವವಾಗಲು ಯಾರು ಕಾರಣ? ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 6 ತಿಂಗಳಿನಲ್ಲಿ ಈ ವಿದ್ಯುತ್ ಕೊರತೆಯನ್ನು ನೀಗಲು ಸಾಧ್ಯವಾಗುತ್ತದೆಯೇ? ಹೋದ ವರ್ಷ ಮಳೆಗಾಲದಲ್ಲಿ ನಮಗೆ ಮಳೆಯ ಕೊರತೆಯಿಂದ ಪ್ರತಿವರ್ಷ ನಮ್ಮಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ನಲ್ಲಿ 1,927 ಮೆಗಾವ್ಯಾಟ್‌ನಷ್ಟು ವಿದ್ಯುತ್ ಕಡಿಮೆಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಚಿಂತನೆ ನಡೆಸಿ ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದ ಈ ವಿದ್ಯುತ್ ಕೊರತೆಯನ್ನು ನಿವಾರಿಸಬೇಕು, ಆ ತೊಂದರೆಯಿಂದ ಕರ್ನಾಟಕಕ್ಕೆ ಮುಕ್ತಿಯನ್ನು ಕೊಡಬೇಕೆಂಬ ವಿಶಾಲ ದೃಷ್ಟಿಯಿಂದ 5900 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡುವ ಬಗ್ಗೆ ಒಂದು ಕ್ರಿಯಾಯೋಜನೆಯನ್ನು ನಾವು ರೂಪಿಸಿದ್ದೇವೆ. ಅದರ ಪ್ರಕಾರ ಛತ್ತೀಸ್‌ಘಡದಲ್ಲಿ 1200 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡಲು ಪ್ಲಾಂಟ್ ಅನ್ನು ನಿರ್ಮಾಣ ಮಾಡುವುದಕ್ಕೆ ರಾಯಪುರದಲ್ಲಿ ಜಮೀನು ಕೊಳ್ಳುವುದಕ್ಕೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇಷ್ಟೇ ಅಲ್ಲ ಬಿಜಾಪುರ, ರಾಯಚೂರಿನಲ್ಲಿ

ಸಹ ವಿದ್ಯುತ್‌ನ್ನು ಉತ್ಪಾದನೆ ಮಾಡಿ, ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ಆಡಳಿತವನ್ನು ನೋಡಬೇಕೆಂದು ನಮಗೇನು ಜನತೆ ಅಧಿಕಾರ ಕೊಟ್ಟಿದ್ದಾರೋ ಅದರನ್ವಯ ಜನರಿಗೆ, ರೈತರಿಗೆ ಸಹಾಯವಾಗುವಂತೆ ವಿಶಾಲ ದೃಷ್ಟಿಯಿಂದ ಇನ್ನು ಕೇವಲ 4-5 ವರ್ಷದಲ್ಲಿ, ನಾಡಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಜನರ ಬಹುದಿನಗಳ ಬೇಡಿಕೆಯಾಗಿರುವ ಅತ್ಯವಶ್ಯಕವಾಗಿ ಬೇಕಾಗಿರುವ ವಿದ್ಯುತ್‌ಚ್ಛಕ್ತಿಯ ಕೊರತೆಯನ್ನು ನನ್ನ ಕಾಲದಲ್ಲಿ ಇಲ್ಲದಿರುವಂತೆ ಮಾಡಬೇಕು ಎನ್ನುವ ಮಹತ್ತರವಾದ ಕೆಲಸ ಭಾರತೀಯ ಜನತಾ ಪಕ್ಷದ ವತಿಯಿಂದ ಆಗಬೇಕು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ಸುಮಾರು 5900 ಮೆಗಾವ್ಯಾಟ್ ವಿದ್ಯುತ್‌ಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಿದ್ದೇವೆ. ನಮ್ಮ ಅಧಿಕಾರದ ಅವಧಿಯಲ್ಲಿ ಈ ಕಾರ್ಯವನ್ನು ಮಾಡಿಯೇ ಮುಗಿಸುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಜನತೆಯ ಹತ್ತಿರಕ್ಕೆ ಅಧಿಕಾರವನ್ನು ಕೊಂಡೊಯ್ಯಬೇಕೆಂಬ ವಿಶಾಲ ದೃಷ್ಟಿಯಿಂದ ಇವತ್ತು ಗ್ರಾಮ, ಜನ ಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ತಿಂಗಳಿನ ಎರಡನೇ ಶನಿವಾರ ಬಿಟ್ಟು ಉಳಿದ ಎಲ್ಲಾ ಶನಿವಾರಗಳಂದು ಅಧಿಕಾರಿಗಳು ರಾಜಕಾರಣಿಗಳು ಎಲ್ಲರೂ ಆ ಸಭೆಯಲ್ಲಿದ್ದು ಆ ಹಳ್ಳಿಯ, ಹೋಬಳಿಯ ಜನರ ಎಲ್ಲಾ ಕುಂದುಕೊರತೆಗಳನ್ನು ನಾವು ಶೇಖರಣೆ ಮಾಡಿ ಅಲ್ಲಿ ಬಂದಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು. ಈ ರೀತಿ ಸುಮಾರು ಐದೂವರೆ ಸಾವಿರ ಅರ್ಜಿಗಳು ಬಂದಿದ್ದು ಅದಕ್ಕೆ ಸುಮಾರು 60-65 ಪರ್ಸೆಂಟ್‌ನಷ್ಟು ಪರಿಹಾರವನ್ನು ನಾವು ಕಂಡುಹಿಡಿದಿದ್ದೇವೆ. ಅಲ್ಲಿ ಬಂದಂಥ ಬಹು ಬೇಡಿಕೆಯಾಗಿರತಕ್ಕದ್ದು ಮನೆಗಳು ಅನಂತರ ಬಿ.ಪಿ.ಎಲ್. ಕಾರ್ಡ್‌ಗಳು. ಈ ಸದನದಲ್ಲಿ ಬಿ.ಪಿ.ಎಲ್ ಕಾರ್ಡ್ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ವಿಶಾಲ ದೃಷ್ಟಿಯಿಂದ ಈ ಬಡಜನತೆಗೆ ನ್ಯಾಯ ಸಿಗಬೇಕು, ಹಿಂದೆ ಆಡಳಿತ ಮಾಡಿಕೊಂಡು ಬಂದಿರುವ ಎಲ್ಲಾ ಸರ್ಕಾರಗಳಲ್ಲೂ ಬಿ.ಪಿ.ಎಲ್. ಕಾರ್ಡ್‌ಗಳಿಗೆ, ನಿಜವಾದ ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವುದರಲ್ಲಿ ಎಲ್ಲೋ ನಾವು ವಂಚಿತರಾಗಿದ್ದೇವೆ, ಆ ವಂಚನೆ ಅನ್ಯಾಯ ಬಡ ಜನತೆಗೆ ಆಗಬಾರದು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ನಮ್ಮ ಆಹಾರ ಸಚಿವರು ಮತ್ತು ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ವಿರೋಧ ಪಕ್ಷದವರು

ಕೊಟ್ಟಂಥ ಸಲಹೆಗಳನ್ನು ಸ್ವಾಗತ ಮಾಡಿ ಅದೆಲ್ಲದಕ್ಕೂ ಪರಿಹಾರ ಕಂಡುಹಿಡಿಯುತ್ತೇನೆ. ಮುಂದಿನ ಮಾರ್ಚ್ ತಿಂಗಳೊಳಗೆ ಬಡವರೆಲ್ಲರಿಗು ಬಿ.ಪಿ.ಎಲ್. ಕಾರ್ಡ್‌ನ್ನು ಕೊಟ್ಟೇ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದ ಬಡ ಜನತೆಗೆ ಅನ್ಯಾಯವಾಗಿದೆಯೆಂಬ ಕೂಗು ಕೇಳಬಾರದು. ನಾವು ಜನಸ್ಪಂದನ ಕಾರ್ಯಕ್ರಮಕ್ಕೆ ಹೋದಂಥ ಸಂದರ್ಭದಲ್ಲಿ ವೃದ್ಧಾಪ್ಯ ವೇತನ, ಸಂಧ್ಯಾಸುರಕ್ಷ, ಭಾಗ್ಯಲಕ್ಷ್ಮಿ ಯೋಜನೆ, ವಿಧವಾ ವೇತನ, ತೊಟ್ಟಿಲು ಭಾಗ್ಯ, ಸಣ್ಣ ರೈತರಿಗೆ ಒಂದು ಸಾವಿರ ಕೊಡುವಂಥ ಕಾರ್ಯಕ್ರಮಗಳು ತುಂಬ ಯಶಸ್ವಿಯಾಗಿದೆ. ಜನರು ತುಂಬಾ ಹತ್ತಿರದಿಂದ ಇಂಥ ಕಾರ್ಯಕ್ರಮಗಳನ್ನು ಆ ಒಂದು ಮುದಿ ವಯಸ್ಸಿನಲ್ಲಿ ಮೆಚ್ಚಿಕೊಂಡಿದ್ದಾರೆ. ಆಶ್ರಯವೇ ಇಲ್ಲದಿರುವಂಥ ವಯಸ್ಸಿನಲ್ಲಿ ಯಾರೂ ಅವರನ್ನು ಪರಿಗಣಿಸದಿರುವ ಸಂದರ್ಭದಲ್ಲಿ ಈ 400 ರೂಪಾಯಿ ವೃದ್ಧಾಪ್ಯ ವೇತನ, ಭಾಗ್ಯಜ್ಯೋತಿಯ ವ್ಯವಸ್ಥೆಯಿಂದ ಆ ಒಂದು ಸಂತೋಷ, ಉತ್ಸಾಹ ಆ ಮುದಿ ಜೀವಕ್ಕೆ ಬಂದಿರುವುದನ್ನು ನೋಡಿದರೆ ನಮಗೆ ನಿಜವಾಗಿಯೂ ಸಂತೋಷವಾಗುತ್ತದೆ. ಅವರು ಹಕ್ಕುಪತ್ರವನ್ನು ಪಡೆಯುವಂಥ ಸಂದರ್ಭದಲ್ಲಿ ಅವರ ಮುಖದಲ್ಲಿ ಮೂಡುವಂಥ ಸಂತೋಷವನ್ನು ನೋಡಿದಾಗ ನಿಜವಾಗಿಯು ಯಡಿಯೂರಪ್ಪನವರು ಎಂಥ ಕೆಳಮಟ್ಟದ, ಬಡತನದ, ಆಶ್ರಯವೇ ಇಲ್ಲದಿರುವಂಥ ವಯಸ್ಸಿನವರನ್ನು ಗುರುತಿಸಿ ಅವರಿಗೆ 400 ರೂಪಾಯಿ ವೃದ್ಧಾಪ್ಯ ವೇತನ ಕೊಟ್ಟಿರುವಂಥದ್ದು ನಿಜವಾಗಿಯೂ ಶ್ಲಾಘನೀಯವಾದದ್ದು. ಹೃದಯ ಶ್ರೀಮಂತಿಕೆಯನ್ನು ಹೊಂದಿರುವ ಒಬ್ಬ ರಾಜಕೀಯ ಮುಖಂಡ ತೆಗೆದುಕೊಂಡಿರುವ ತೀರ್ಮಾನ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ರೈತರು, ಸಣ್ಣ ರೈತರು ಹಿಂದೆ ನೇಣು ಹಾಕಿಕೊಂಡು ಸಾಯುತ್ತಿದುದ್ದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೆವು. ಅವರು ಏಕೆ ಸಾಯುತ್ತಾರೆ? ಇವತ್ತು ನಮ್ಮ ರಾಷ್ಟ್ರ ಮತ್ತು ರಾಜ್ಯದಲ್ಲಿ ರೈತರು ಬೆಳೆದಂಥ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ. ಅವರು ಬೆಳೆದಂಥ ಬೆಳೆಗೆ ಧಾರಣೆ ಕಟ್ಟುವಂಥ ವ್ಯವಸ್ಥೆ ನಮ್ಮ ಸಮಾಜದಲ್ಲಿ ಒಬ್ಬ ದಳ್ಳಾಳಿಗಿದೆ. ಆದರೆ ಅದು ಸರ್ಕಾರಕ್ಕೆ ಅಥವಾ ಒಬ್ಬ ರೈತನಿಗೆ ಇಲ್ಲ. ಇಂಥ ಸಂದರ್ಭದಲ್ಲಿ ಆ ರೈತರಿಗೆ ಏನಾದರು ನಾವು ಸಹಾಯ ಮಾಡಬೇಕು ಎಂಬ ವಿಶಾಲ ದೃಷ್ಟಿಯಿಂದ ಇವತ್ತು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸರ್ಕಾರದಿಂದ ಒಂದು ಸಾವಿರ ರೂಪಾಯಿ ಕೊಡುವ ವ್ಯವಸ್ಥೆ ಬಂದಿದೆಯಲ್ಲ ಇದು ತುಂಬಾ ಶ್ಲಾಘನೀಯವಾದ ವಿಚಾರ. ಭಾಗ್ಯಲಕ್ಷ್ಮಿ ಎಂಬ ಯೋಜನೆಯನ್ನು ಹಿಂದೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದಿದ್ದರು.

ಮಾನ್ಯ ಯಡಿಯೂರಪ್ಪನವರು ಒಂದು ಹೆಜ್ಜೆ ಮುಂದೆ ಹೋಗಿ ಯಾವುದೇ ಹೆಣ್ಣು ಮಗು ಹುಟ್ಟದರೆ ಆ ಮಗುವಿಗೆ 20 ಸಾವಿರ ರೂಪಾಯಿ ಡಿಪಾಜಿಟ್ ಇಟ್ಟು ಆ ಮಗು 18 ವರ್ಷ ವಯಸ್ಸಿಗೆ ಬಂದಾಗ ಒಂದು ಲಕ್ಷ ರೂಪಾಯಿಗಳು ಸಿಗುವಂಥ ಯೋಜನೆಯನ್ನು ಮಾಡಿದ್ದಾರೆ. ಇದರಿಂದ ಹೆಣ್ಣು ಹೆತ್ತವರಲ್ಲಿ ಅಪಾರವಾದಂಥ ಸಂತೋಷದ ದಿನಗಳನ್ನು ನಾವು ಕಾಣುತ್ತಿದ್ದೇವೆ. ಇವೆಲ್ಲವನ್ನು ನೋಡಿದಾಗ ನಿಜವಾಗಿಯೂ ಇವತ್ತೇನು ಮಾನ್ಯ ಯಡಿಯೂರಪ್ಪನವರು ಭಾರತೀಯ ಜನತಾ ಪಕ್ಷದ ಚಿಂತನೆ ಯಾವ ದಿಕ್ಕಿನಲ್ಲಿ ಸಾಗಿದೆಯೆಂದರೆ, ಉದಾಹರಣೆಗೆ ನನ್ನ ಚೆಳ್ಳಕೆರೆ ತಾಲ್ಲೂಕಿನಲ್ಲಿ ಒಂದೊಂದು ಹಳ್ಳಿಗೂ ಆಶ್ರಯ ಯೋಜನೆ, ವೃದ್ಧಾಪ್ಯ ವೇತನ, ಅಂಗ ವಿಕಲ ವೇತನ, ವಿಧವಾ ವೇತನ ಇವುಗಳು ಒಂದೊಂದು ಹಳ್ಳಿಗೆ ಸುಮಾರು 40, 50, 35, 20 ,15 ಸಾವಿರ ರೂಪಾಯಿವರೆಗೆ ಪ್ರತಿ ತಿಂಗಳು ಸರ್ಕಾರದ ಹಣ ಹಳ್ಳಿಯ ಬಡ ಜನತೆಗೆ ಸಿಗುತ್ತಿರತಕ್ಕ ಒಂದು ವ್ಯವಸ್ಥೆಗೆ ಮೂಲ ಕಾರಣೀಭೂತರೆಂದರೆ ಮಾನ್ಯ ಯಡಿಯೂರಪ್ಪನವರು.

ಇದರ ಜೊತೆಗೆ ಇವತ್ತೇನು ಸಣ್ಣ ರೈತರು ಡೈರಿಗಳಿಗೆ ಹಾಲನ್ನು ಕೊಡುತ್ತಿದ್ದರೋ, ಅಂತಹ ರೈತರಿಗೆ ಸಹಾಯಧನವಾಗಿ ಒಂದು ಲೀಟರಿಗೆ 2 ರೂ.ಗಳಂತೆ ನಾವು ಕೊಡುತ್ತಿದ್ದೇವೆ. ಯಾವ ರೈತರು ಸರ್ಕಾರದಿಂದ ಸಾಲ ಪಡೆಯುತ್ತಾರೋ, ಅವರಿಗೆ ಶೇಕಡ 3ರಷ್ಟು ಬಡ್ಡಿ ದರದಲ್ಲಿ ಸಾಕಷ್ಟು ಹಣವನ್ನು ಒದಗಿಸುತ್ತಿರುವುದನ್ನು ಇವತ್ತು ನಾವು ಕಾಣಬಹುದಾಗಿದೆ. ವಿರೋಧ ಪಕ್ಷಗಳು ಕೆಲವೊಂದು ಟೀಕೆಗಳನ್ನು ಮಾಡಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ವಿರೋಧ ಪಕ್ಷಗಳು 'ಮಾನ್ಯ ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೇವಲ ವರ್ಗಾವಣೆಗಳನ್ನೇ ಮಾಡುತ್ತಿದೆ, ಅದೇ ಇವರ ದಂಧೆಯಾಗಿದೆ, ವರ್ಗಾವಣೆಗಳನ್ನು ಮಿತಿ ಮೀರಿ ಮಾಡುತ್ತಿದ್ದಾರೆ, ಇದರಲ್ಲಿ ಅತ್ಯಂತ ಹೆಚ್ಚಿನ ಲಂಚವನ್ನು ಪಡೆಯುತ್ತಿದ್ದಾರೆ' ಎಂದು ಆರೋಪ ಮಾಡಿವೆ...

[ಗೊಂದಲ]

ಉಪಾಧ್ಯಕ್ಷರು :- ದಯವಿಟ್ಟು ಮಧ್ಯೆ ಮಾತನಾಡುವುದು ಬೇಡ.

ಶ್ರೀ ತಿಪ್ಪೇಸ್ವಾಮಿ :- ಈಗ ನಾನು ಹೇಳುವ ಅಂಕಿ ಸಂಖ್ಯೆಗಳನ್ನು ಮಾನ್ಯ ವಿರೋಧ ಪಕ್ಷದ ಸ್ನೇಹಿತರು ದಯವಿಟ್ಟು ಕೇಳಬೇಕು. ಕೇವಲ ವಾಸ್ತವಾಂಶಗಳ ಬಗ್ಗೆ ಮಾತ್ರ ಅವರು ಮಾತನಾಡಬೇಕು. ಕರ್ನಾಟಕದ ಜನ ಬಹಳ

ಬುದ್ಧಿವಂತರಾಗಿದ್ದಾರೆ. ವಿರೋಧ ಪಕ್ಷದವರು ಸತ್ಯಾಂಶವನ್ನು ಮಾತ್ರ ವಾದ ಮಾಡಲಿ. ಸತ್ಯಾಂಶವನ್ನು ನಂಬುವಂತಹ ಜನತೆ ಮಾತ್ರವೇ ಇಂದು ಕರ್ನಾಟಕದಲ್ಲಿದ್ದಾರೆಯೇ ವಿನ: ಏನೋ ಬಾಯಿಗೆ ಬಂದಂತೆ ಮಾತನಾಡಿದರೆ ಅವರು ಅದನ್ನು ನಂಬುವುದಿಲ್ಲ.....

[ಗೊಂದಲ]

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ತಿಪ್ಪೇಸ್ವಾಮಿ :- ಇವತ್ತು ನಾವು ವರ್ಗಾವಣೆ ಬಗ್ಗೆ ಕೊಡುವ ಅಂಕಿ ಅಂಶಗಳನ್ನು ದಯವಿಟ್ಟು ನಮ್ಮ ಸ್ನೇಹಿತರು ಕೇಳಬೇಕು. 2004ರಲ್ಲಿ 24169 ವರ್ಗಾವಣೆಗಳಾಗಿವೆ. 2005ರಲ್ಲಿ 34160 ವರ್ಗಾವಣೆಗಳಾಗಿವೆ. 2006ರಲ್ಲಿ 44402 ವರ್ಗಾವಣೆಗಳಾಗಿವೆ. 2007ರಲ್ಲಿ 25402 ವರ್ಗಾವಣೆಗಳಾಗಿವೆ. 2008ರಲ್ಲಿ, ಅಂದರೆ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ, ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಕೇವಲ 15135 ವರ್ಗಾವಣೆಗಳನ್ನು ಮಾತ್ರ ಮಾಡಿದೆ.

[ಗೊಂದಲ]

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಧ್ಯೆ ಯಾರೂ ಮಾತನಾಡಬೇಡಿ. ನಿಮಗೆ ಮಾತನಾಡಲು ಅವಕಾಶ ಸಿಕ್ಕಾಗ ನೀವು ಮಾತನಾಡಬೇಕಾಗಿರುವುದನ್ನು ಹೇಳಿ. ಈಗ ಮಾತನಾಡಬೇಡಿ.

[ಗೊಂದಲ]

ದಯವಿಟ್ಟು ಮಾನ್ಯ ಸದಸ್ಯರು ಮಾತು ಮುಂದುವರೆಸಲಿಕ್ಕೆ ಅವಕಾಶ ಕೊಡಿ. ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಮೊದಲು ಅವರು ಮಾತನಾಡುವುದನ್ನು ಕೇಳಿ.

[ಗೊಂದಲ]

ಶ್ರೀ ಆರ್. ರೋಷನ್ ಬೇಗ್ :- ದಯವಿಟ್ಟು ಸುಳ್ಳು ಹೇಳಬಾರದು. ತಪ್ಪು ಅಂಶಗಳು recordಗೆ ಹೋಗಬಾರದು.

[ಗೊಂದಲ]

ಉಪಾಧ್ಯಕ್ಷರು :- ಅದರ ಬಗ್ಗೆ ನಂತರ ತೀರ್ಮಾನವಾಗುತ್ತದೆ ಬಿಡಿ.

[ಗೊಂದಲ]

ಶ್ರೀ ಸಿ.ಟಿ. ರವಿ :- ಮಾನ್ಯ ತಿಪ್ಪೇಸ್ವಾಮಿಯವರು ದಯವಿಟ್ಟು ವಿರೋಧ ಪಕ್ಷಗಳಿಗೆ ಸತ್ಯವನ್ನು ಹೇಳಬಾರದು. ನೀವು ಅವರಿಗೆ ಒಪ್ಪಿಗೆ ಆಗಿರುವುದನ್ನು ಮಾತ್ರ ಹೇಳಬೇಕು.

[ಗೊಂದಲ]

ಉಪಾಧ್ಯಕ್ಷರು :- ಮಾನ್ಯ ತಿಪ್ಪೇಸ್ವಾಮಿಯವರು ದಯವಿಟ್ಟು ಮಾತನಾಡುವುದನ್ನು ಮುಂದುವರೆಸಿ.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ತಿಪ್ಪೇಸ್ವಾಮಿಯವರು year-wise ಹೇಳುತ್ತಿರುವುದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಆದರೆ ನಾನು ಅವರಿಗೆ ಒಂದು ಮನವಿ ಮಾಡುತ್ತೇನೆ. ನನ್ನ ಕಾಲದಲ್ಲಿ ಬಿ.ಜೆ.ಪಿ. ಮಂತ್ರಿಗಳ ಇಲಾಖೆಗಳಲ್ಲಿ ಯಾವ್ಯಾವ ರೀತಿ transferಗಳಾಗಿವೆ, ನಮ್ಮ ಪಕ್ಷದವರು ಮಂತ್ರಿಗಳಾಗಿದ್ದ ಇಲಾಖೆಗಳಲ್ಲಿ ಎಷ್ಟೆಷ್ಟು transferಗಳಾಗಿವೆ ಎಂಬ ಬಗ್ಗೆ cut-off ಇದ್ದರೆ, ದಯವಿಟ್ಟು ಅವರು ಅದನ್ನು ಹೇಳುವುದು ಒಳ್ಳೆಯದು.

[ಗೊಂದಲ]

ಶ್ರೀ ಸಿ.ಸಿ. ಪಾಟೀಲ್ :- .... JD [S] ಎಲ್ಲಾ ಮಂತ್ರಿಗಳ ಖಾತೆಗಳನ್ನು ಮಾನ್ಯ ರೇವಣ್ಣನವರೇ ನೋಡಿಕೊಳ್ಳುತ್ತಿದ್ದರು. ಆದ್ದರಿಂದ ಆ ಇಲಾಖೆಗಳಲ್ಲಿ ಕಡಿಮೆ transfers ಆಗಿವೆ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಎಲ್ಲಾ ಖಾತೆ ನನ್ನ ಕೈಯಲ್ಲಿತ್ತು ಎಂದು ಹೇಳುತ್ತಿದ್ದಾರೆ. Education, ಅಬಕಾರಿ ಲೈಸೆನ್ಸ್ ಕೊಡುವುದು, ಬ್ರಾಂಡಿ ಶಾಪ್‌ಗೆ ಅನುಮತಿ ಕೊಡುವುದು ನನ್ನ ಕೈಯಲ್ಲಿತ್ತು.

ಬೆಂಗಳೂರಿನಲ್ಲಿ 4[1] ಮಾಡಿ, 6[1] ಫೈನಲ್ ನೋಟಿಫಿಕೇಷನ್ ಮಾಡದೆ 14 ಸಾವಿರ ಎಕರೆಗಳನ್ನು ಹಂಚಲಾಯಿತು. ಆ ಖಾತೆ ಅವರ ಹತ್ತಿರವೇ ಇತ್ತು. ನನ್ನ ಹತ್ತಿರ ಅಂತಹ ಖಾತೆಗಳೇನೂ ಇರಲಿಲ್ಲ.

[ಗೊಂದಲ]

ಶ್ರೀ ತಿಪ್ಪೇಸ್ವಾಮಿ :- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಕೇಳಿದಂತಹ ಮಾಹಿತಿ ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಆಮೇಲೆ ಆ ಮಾಹಿತಿಗಳನ್ನು ನಾನು ತರಿಸಿಕೊಳ್ಳುತ್ತೇನೆ. ಬೆಂಗಳೂರು-ಮೈಸೂರು ಕಾರಿಡಾರ್ ರಸ್ತೆ ಬಗ್ಗೆ ಹೇಳುವುದಾದರೆ, ಇದು ಸನ್ಮಾನ್ಯ ದೇವೇಗೌಡರ ಕಾಲದಲ್ಲಿ ಜಾರಿಗೆ ಬಂದಿತ್ತು. ಅವರ ಸಂಪುಟದಲ್ಲಿ ನಾನೂ ಕೂಡ ಮಂತ್ರಿಯಾಗಿದ್ದೆ. 1995ರಲ್ಲಿ ಈ ಒಂದು ವ್ಯವಸ್ಥೆಗೆ ಸನ್ಮಾನ್ಯ ದೇವೇಗೌಡರೇ ಚಾಲನೆಯನ್ನು ಕೊಟ್ಟಿದ್ದರು....

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಸನ್ಮಾನ್ಯ ದೇವೇಗೌಡರು ಸಹಿ ಮಾಡಿದಂತಹ ಸಂದರ್ಭದಲ್ಲಿ ಇದ್ದಂತಹ ಕಂಪೆನಿಗಳೇ ಬೇರೆ. ಆಮೇಲೆ ಹೊಸ ಕಂಪೆನಿಗಳನ್ನು ಹುಟ್ಟು ಹಾಕಲಾಗಿದೆ. BMIC ಬಗ್ಗೆ ಇದೇ ಸದನದಲ್ಲಿ ಐದೂವರೆ ಗಂಟೆಗಳ ಕಾಲ ಉತ್ತರ ಕೊಟ್ಟಿದ್ದೇನೆ. ಅವತ್ತು ನನ್ನ ಸಹಾಯಕ್ಕೆ ಯಾರೂ ಬರಲಿಲ್ಲ. ಇವತ್ತು ಕೋರ್ಟಿನಲ್ಲಿ ಅದರ ಬಗ್ಗೆ ಕೇಸ್ ಇದೆ. ಸನ್ಮಾನ್ಯ ದೇವೇಗೌಡರೇ ಆ ಕೇಸಿನಲ್ಲಿ ಇವತ್ತು appear ಆಗುತ್ತಿದ್ದಾರೆ. ಆದ್ದರಿಂದ ಇವತ್ತು BMIC ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ತಿಪ್ಪೇಸ್ವಾಮಿಯವರು ಬಹಳ ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದಾರೆ. ಈ ಸದನದಲ್ಲಿ ಇಲ್ಲದಿರುವವರ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದು ಸೂಕ್ತವಲ್ಲ.

ಉಪಾಧ್ಯಕ್ಷರು :- ಕೋರ್ಟ್‌ನಲ್ಲಿ ಇರುವಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬೇಡಿ ಎಂದು ಹೇಳುತ್ತೇನೆ ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ :- ಈ ವಿಷಯದ ಬಗ್ಗೆ ಚರ್ಚೆಗೆ ನಾವು ಸಿದ್ಧರಿದ್ದೇವೆ. ಇಲ್ಲವೆಂದರೆ ಬೇಕಾದರೆ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ refer ಮಾಡಲಿ. ಮಾನ್ಯ ದೇವೇಗೌಡರನ್ನು ಬೇಕಾದರೆ ಜೈಲಿಗೆ ಹಾಕಲಿ. ಸದನದಲ್ಲಿ ಇಲ್ಲದಿರುವ ಮಾನ್ಯ ದೇವೇಗೌಡರ ಹೆಸರನ್ನು ಮಾನ್ಯ ತಿಪ್ಪೇಸ್ವಾಮಿಯವರು ಪ್ರಸ್ತಾಪಿಸಬಾರದೆಂದು ಹೇಳಿ.

ಉಪಾಧ್ಯಕ್ಷರು :- ದಯವಿಟ್ಟು ಕೋರ್ಟಿನಲ್ಲಿ ಇರುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದು ಬೇಡ.

ಶ್ರೀ ತಿಪ್ಪೇಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, 2008ರ ಡಿಸೆಂಬರ್ ಅಂತ್ಯದ ವೇಳೆಗೆ ಸಂಗ್ರಹವಾಗಿರತಕ್ಕ ತೆರಿಗೆ ಬಗ್ಗೆ ಪಕ್ಷಿನೋಟವೊಂದನ್ನು ನಾನು ಕೊಡಬಯಸುತ್ತೇನೆ. ವಾಣಿಜ್ಯ ತೆರಿಗೆಯಿಂದ 2007ರಲ್ಲಿ 11,047 ಕೋಟಿ ರೂ.ಗಳು ಸಂಗ್ರಹವಾಗಿತ್ತು. ಆದರೆ 2008-09ರಲ್ಲಿ 12,677 ಕೋಟಿ ರೂ.ಗಳು ಸಂಗ್ರಹವಾಗಿದೆ. ಇದರಲ್ಲಿ ಶೇಕಡ 14.8ರಷ್ಟು ಟ್ಯಾಕ್ಸ್ ಅನ್ನು ನಾವು ಹೆಚ್ಚಿಗೆ ಸಂಗ್ರಹಿಸಿದ್ದೇವೆ. ಏಕೆ ನಾನು ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ ಎಂದರೆ, ಇವತ್ತು share market ಬಿದ್ದು ಹೋಗಿದೆ. ಇಡೀ ವಿಶ್ವದಲ್ಲಿ ಆರ್ಥಿಕ ಪರಿಸ್ಥಿತಿ ಕೆಳಮಟ್ಟಕ್ಕೆ ಹೋಗಿದ್ದರೂ ಸಹ, ಇಂತಹ ಕಷ್ಟ ಕಾಲದಲ್ಲೂ ನಾವು tax collect ಮಾಡುವುದರಲ್ಲಿ ದಿಟ್ಟ ಹೆಜ್ಜೆ ಮುಂದಿಟ್ಟಿದ್ದೇವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಬಕಾರಿಯಿಂದ ನಮಗೆ ....

[ಗೊಂದಲ]

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ. ಮಧ್ಯೆ ಮಧ್ಯೆ ಮಾತನಾಡುವುದು ಬೇಡ.

[ಗೊಂದಲ]

ಶ್ರೀ ತಿಪ್ಪೇಸ್ವಾಮಿ :- ಅಬಕಾರಿಯಿಂದ 2007-08ರಲ್ಲಿ 3,436 ಕೋಟಿ ರೂ.ಗಳು ಸಂಗ್ರಹವಾಗಿದ್ದರೆ, 2008-09ರಲ್ಲಿ 3,944 ಕೋಟಿ ರೂ.ಗಳು ಸಂಗ್ರಹವಾಯಿತು. ಡಿಸೆಂಬರ್ ಅಂತ್ಯದವರೆಗೆ ಸಂಗ್ರಹವಾಗಿರುವುದನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ವರ್ಷದ ಪೂರ್ತಿ ತೆರಿಗೆ ಸಂಗ್ರಹವಾಗಿರುವುದನ್ನು ನಾನು ಇಲ್ಲಿ ಹೇಳುತ್ತಿಲ್ಲ. Excise ನಿಂದಲೂ ಸಹ ನಾವು ಶೇಕಡ 14.9ರಷ್ಟು ಜಾಸ್ತಿ ತೆರಿಗೆಯನ್ನು ಡಿಸೆಂಬರ್ ಅಂತ್ಯದವರೆಗೆ collect ಮಾಡಿದ್ದೇವೆ. ವಾಹನ ತೆರಿಗೆ ಬಗ್ಗೆ ಹೇಳುವುದಾದರೆ, 2007-08ರಲ್ಲಿ 1213 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದ್ದರೆ, 2008-09ರಲ್ಲಿ 1324 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಶೇಕಡ 9.8ರಷ್ಟು ಹೆಚ್ಚಿಗೆ ನಾವು tax collect ಮಾಡಿದ್ದೇವೆ. ಸರಾಸರಿ ಡಿಸೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಶೇಕಡ 14.4ರಷ್ಟು ಜಾಸ್ತಿ tax ಅನ್ನು ನಾವು collect ಮಾಡಿದ್ದೇವೆ. ಇನ್ನು 2008ರ ಡಿಸೆಂಬರ್

ಅಂತ್ಯದವರೆಗಿನ ಯೋಜನೇತರ ವೆಚ್ಚದ ಬಗ್ಗೆ ಹೇಳುವುದಾದರೆ, 2003ರಲ್ಲಿ 4,015 ಕೋಟಿ ರೂ.ಗಳು ಬಂದಿದೆ.

2004ರಲ್ಲಿ 5043 ಕೋಟಿ ಬಂದಿದೆ,2005ರಲ್ಲಿ 6194 ಕೋಟಿ ಬಂದಿದೆ, 2006ರಲ್ಲಿ 7844 ಕೋಟಿ ಬಂದಿದೆ, 2007ರಲ್ಲಿ 7721 ಕೋಟಿ ಬಂದಿದೆ. ಮಾನ್ಯ ಯಡಿಯೂರಪ್ಪನವರ ಅಧಿಕಾರಾವಧಿಯೊಳಗೆ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ 2008ರಲ್ಲಿ 9488 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಿಸಿ ಸಾಧನೆಯನ್ನು ನಾವು ಮಾಡಿದ್ದೇವೆ. ಈ ಅಂಕಿ ಅಂಶಗಳನ್ನು ನಾನು ಏತಕ್ಕೆ ಕೊಟ್ಟೆ ಎಂದರೆ, ಇವತ್ತು ಷೇರು ಮಾರುಕಟ್ಟೆ ಬಿದ್ದುಹೋಗಿದೆ, ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಹಣದ ವಹಿವಾಟು ಕಡಿಮೆಯಾದರು ಸಹಿತ, ಇಂತಹ ಕಷ್ಟದಲ್ಲಿ ಕೂಡ ಯಡಿಯೂರಪ್ಪನವರ ಅಧಿಕಾರವಧಿಯಲ್ಲಿ ಯಾವುದೇ ಕಂಟ್ರಾಕ್ಟರ್ ಬಿಲ್ ಬೌನ್ಸ್ ಆಗಿಲ್ಲ, ಎಲ್ಲಿಯೂ ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದರಲ್ಲಿ ಕಡಿಮೆಯಾಗಿಲ್ಲ. ಇಷ್ಟೊಂದು ದಕ್ಷತೆಯಿಂದ ಆಡಳಿತವನ್ನು ಮಾಡಿ, ಜನರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟರೂ ಸಹಿತ ಇವತ್ತು ಇಂತಹ ಒಂದು ಆಡಳಿತ ಜನರು ಬೇಕೆಂದು ಮೊನ್ನೆ ನಡೆದ ಉಪಚುನಾವಣೆಯಲ್ಲಿ ಕರ್ನಾಟಕದ ಜನ ಭಾರತೀಯ ಜನತಾಪಕ್ಷಕ್ಕೆ ಆಶೀರ್ವಾದವನ್ನು ಮಾಡಿ 5 ಸೀಟುಗಳಲ್ಲಿ ಗೆಲ್ಲಿಸಿದ್ದಾರೆ. ಇನ್ನು ನಮಗೆ ಉತ್ಸಾಹ, ಪ್ರೋತ್ಸಾಹ ಕೊಟ್ಟಂಥ ಕರ್ನಾಟಕದ ಜನತೆಯನ್ನು ನಾವು ಮರೆಯುವುದಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಭಾರತೀಯ ಜನತಾ ಪಕ್ಷ, ಈ ನಾಡಿನ ಮುಖ್ಯಮಂತ್ರಿಗಳು ಹಾಗೂ ಸಹೋದ್ಯೋಗಿ ಮಂತ್ರಿಗಳೆಲ್ಲರೂ ಸಹಿತ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಹಣವನ್ನು ರೈತರ, ಬಡಜನತೆಯ ಉದ್ಧಾರಕ್ಕಾಗಿ, ವಿದ್ಯುತ್ ಉತ್ಪಾದನೆಗಾಗಿ ಕೊಟ್ಟು ಭಾರತದ ಅತ್ಯಂತ ದಕ್ಷ, ಪ್ರಾಮಾಣಿಕ ಭಾರತೀಯ ಜನತಾಪಕ್ಷದ ನಾಯಕ ಯಡಿಯೂರಪ್ಪ ಎಂದು ಹೇಳಿ ನಾವು ಹೆಗ್ಗಳಿಕೆಗೆ ಪಾತ್ರರಾಗುತ್ತೇವೆ. ಇನ್ನು 5 ವರ್ಷದಲ್ಲಿ ಇಡೀ ಜನತೆ ಭಾರತೀಯ ಜನತಾಪಕ್ಷದ ಕಡೆಗೆ ನೋಡುವಂತೆ ಮಾಡುತ್ತೇವೆ ಎಂದು ಹೇಳಿ, ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ [ತೇರದಾಳ] :- ಮಾನ್ಯ ಅಧ್ಯಕ್ಷರೆ, 2009 ಜನವರಿ 16ನೇ ತಾರೀಖಿನಂದು ಮಾನ್ಯ ರಾಜ್ಯಪಾಲರು ಉಭಯಸದನವನ್ನು ಉದ್ದೇಶಿಸಿ ಮಂಡಿಸಿರುವ ಭಾಷಣದ ಮೇಲೆ ಭಾಗವಹಿಸಿ ಮಾತನಾಡಲು ಅವಕಾಶ ಕೊಟ್ಟಿರುವ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ವಿಚಾರಗಳನ್ನು ಇಲ್ಲಿ ಮಂಡನೆ

ಮಾಡಲು ಬಯಸುತ್ತೇನೆ. ಇವತ್ತು ಇಲ್ಲಿ ಸಾಕಷ್ಟು ವಿಷಯಗಳು ಚರ್ಚೆಯಾದವು. ಪಡಿತರ ಚೀಟಿ ಬಗ್ಗೆ, ಗಣಿಗಾರಿಕೆಯ ಬಗ್ಗೆ ಹೀಗೆ ಅನೇಕ ವಿಚಾರಗಳು ಚರ್ಚೆಗೆ ಬಂದವು. ಆದರೆ ನಮಗೊಂದು ಆಶ್ಚರ್ಯವೆನಿಸುತ್ತದೆ. ಈ ಗಣಿಗಾರಿಕೆ ವಿಷಯವಾಗಿರಬಹುದು, ನೈಸ್ ಕಂಪನಿಯ ವಿಷಯವಾಗಿರಬಹುದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 6-7 ತಿಂಗಳಾಯಿತು. ಗಣಿಗಾರಿಕೆಗೆ ನಾವು ಯಾವುದೇ ಲೈಸೆನ್ಸ್ ಕೊಟ್ಟಿಲ್ಲ, ಯಾವುದೇ ನೈಸ್ ಕಂಪನಿಯ ವ್ಯವಹಾರದಲ್ಲಿ ಭಾಗಿಯಾಗಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರೂ ಸಹಿತ, ಮಾಡಬೇಕಾದ ಹಗರಣಗಳನ್ನೆಲ್ಲಾ ಹಿಂದಿನ ಸರ್ಕಾರಗಳು ಮಾಡಿ, ರಾಡಿ ಮಾಡಿ ಅದನ್ನು ನಮ್ಮ ಮೇಲೆ ಒಗೆಯುವಂಥ ಪ್ರಸಂಗ ಮಾಡಿದ್ದು ನಮಗೆ ಆಶ್ಚರ್ಯವನ್ನುಂಟು ಮಾಡಿದೆ, ಇದಕ್ಕೆ ಏನು ಹೇಳಬೇಕೆಂದು ತಿಳಿಯದಾಗಿದೆ. ಸುಮಾರು 6 ತಿಂಗಳಲ್ಲಿ ಈ ಹಿಂದೆ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ವಿಚಾರಗಳ ಬಗ್ಗೆ ನಮ್ಮ ಸರ್ಕಾರದ ಮೇಲೆ ದೋಷಾರೋಪಣೆ ಮಾಡುವುದು ಯೋಗ್ಯವಲ್ಲವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮತ್ತು ಅದರ ಜೊತೆಗೆ ನಮ್ಮ ಸರ್ಕಾರ ಈ 7 ತಿಂಗಳಿನಲ್ಲಿ ಮಾಡಿರುವ ಸಾಧನೆಯ ಬಗ್ಗೆ ಹೆಮ್ಮೆಪಡುತ್ತೇವೆ. ಏಕೆಂದರೆ, ಈಗಾಗಲೇ ನಮ್ಮ ಹಿರಿಯ ಸದಸ್ಯರು ಮಾತನಾಡಿದ ಪ್ರಕಾರ ಈ ಜಗತ್ತಿನ ಆರ್ಥಿಕ ಪರಿಸ್ಥಿತಿ ಹಿನ್ನಡೆಯಾದರೂ ಸಹಿತ, ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದರೂ ಸಹಿತ, ನಮ್ಮ ರಾಜ್ಯದಲ್ಲಿ ತೆರಿಗೆ ಸಂಗ್ರಹದ ಗುರಿ 12-14% ವರೆಗೆ ಹೆಚ್ಚಿಗೆ ಮಾಡಿರುವ ಸಂಗತಿಯನ್ನು ಕೇಳಿದಾಗ ನಮ್ಮ ಯಡಿಯೂರಪ್ಪನವರ ಕಾರ್ಯವೈಖರಿಯ ಬಗ್ಗೆ ಹೆಮ್ಮೆ ಎನಿಸುತ್ತದೆ. ಅದಕ್ಕಾಗಿ ಈ ರೀತಿ ಪ್ರಾಮಾಣಿಕವಾಗಿ ರೈತರ ಪರವಾಗಿರುವ, ಬಡಜನರ ಪರವಾಗಿ ಸರ್ಕಾರ ನಡೆಸುತ್ತಿರುವ ಯಡಿಯೂರಪ್ಪನವರ ಸಾಕಷ್ಟು ಯೋಜನೆ, ಸಾಧನೆಗಳನ್ನು ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರು ಹೇಳಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಒಂದು ವಿಷಯ, ನಮ್ಮ ಸರ್ಕಾರ ರಚನೆಯಾದ ತಕ್ಷಣ ಕೆಲವೊಂದು ಗೊಂದಲಗಳು ಸೃಷ್ಟಿಯಾಗುವಂಥ ವಾತಾವರಣ ನಿರ್ಮಾಣವಾಯಿತು, ಅದೇನೆಂದರೆ, ವಿದ್ಯುತ್‌ನ ಅಭಾವ. ನಾನು ಈ ಸಭೆಯ ಮುಖಾಂತರ ಕೇಳಬಯಸುತ್ತೇನೆ; ವಿದ್ಯುತ್ ಅನ್ನು ಯಾವುದೇ ಸರ್ಕಾರ ಒಮ್ಮೆಲೆ ಅಧಿಕಾರಕ್ಕೆ ಬಂದ ತಕ್ಷಣ ಜಾದು ಮಾಡಿ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ಸ್ಥಿತಿಯಲ್ಲಿ ಕಳೆದ 2-3 ತಿಂಗಳ ಹಿಂದೆ ವಿದ್ಯುತ್ತಿನ ಒಂದು ಅನಾಹುತವಾಗಿತ್ತು ಇದಕ್ಕೆ ಯಾರಾದರೂ ಕಾರಣವಾಗಿದ್ದರೆ, ಈ ರಾಜ್ಯವನ್ನು ಹಿಂದೆ ಆಳಿದಂಥ ಆ ಪಕ್ಷಗಳು ಕಾರಣವೆಂದು

ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಏಕೆಂದರೆ, ಅವರ ಒಂದು ಅವಧಿಯಲ್ಲಿ ನಾನೂ ಒಬ್ಬ ರೈತ, ಯಾವ ರೀತಿ ವಿದ್ಯುತ್ ಇತ್ತು? ಅಲ್ಲಿ 4 ಗಂಟೆ ವಿದ್ಯುತ್ ಕೊಟ್ಟರು ಸಹಿತ 2 ಗಂಟೆ, ಒಂದು ಗಂಟೆ ನಿರಂತರವಾಗಿ ನಮ್ಮ ರೈತರು ವಿದ್ಯುತ್ ಪಡೆಯಲಾಗದಂಥ ಸಂಗತಿ ಒಂದು ಸಂದರ್ಭ ಹಳ್ಳಿಗಳಲ್ಲಿ ಇತ್ತು. ಇಂಥ ಸಂದರ್ಭದಲ್ಲಿ ನಮ್ಮ ಇಂಧನ ಸಚಿವರಾದ ಮಾನ್ಯ ಈಶ್ವರಪ್ಪನವರು, ನಮ್ಮ ಮುಖ್ಯಮಂತ್ರಿಗಳು ಆ ಬಗ್ಗೆ ತುರ್ತಾಗಿ ಸಭೆಯನ್ನು ಕರೆದು ಈ ರಾಜ್ಯಕ್ಕೆ, ರೈತರಿಗೆ ಅನ್ಯಾಯವಾಗಬಾರದೆಂಬ ದೃಷ್ಟಿಯಿಂದ, ರಾಜ್ಯ ಖಜಾನೆಗೆ ಹೆಚ್ಚಿನ ಹೊರೆಬಿದ್ದರೂ ಪರವಾಗಿಲ್ಲವೆಂದು ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ಸಕ್ಕರೆ ಕಾರ್ಖಾನೆಗಳಿಂದ ವಿಶೇಷವಾಗಿ ವಿದ್ಯುತ್ ಅನ್ನು ಹೆಚ್ಚಿನ ಬೆಲೆಗೆ ಖರೀದಿ ಮಾಡಿ ನಮ್ಮ ರೈತರಿಗೆ 6 ಗಂಟೆಗಳ ತ್ರಿಫೇಸ್, 6 ಗಂಟೆ ಸಿಂಗಲ್ ಫೇಸ್ ವಿದ್ಯುತ್ ಅನ್ನು ನಿರಂತರವಾಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರಿಂದ ನಮ್ಮ ರೈತರು ಇಡೀ ರಾಜ್ಯದಲ್ಲಿ ಖುಷಿಯಾಗಿದ್ದಾರೆ. ಇದಕ್ಕಾಗಿ ವಿದ್ಯುತ್ ಖಾತೆ ಸಚಿವರಾದ ಮಾನ್ಯ ಈಶ್ವರಪ್ಪ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏನಾದರು ತೆಗೆಳುವುದಿದ್ದರೆ, ಹಿಂದಿನ ಸರ್ಕಾರಗಳನ್ನು ತೆಗಳಬೇಕು. ಪೂರ್ವ ಯೋಜನೆ ಇಲ್ಲದೇ ವಿದ್ಯುತ್ ಉತ್ಪಾದನೆ ಮಾಡಲಾರದಂಥ ಒಂದು ಕಷ್ಟಕರವಾದ ಸ್ಥಿತಿಯನ್ನು ಈ ರಾಜ್ಯಕ್ಕೆ ತಂದಿರುವಂಥ ಒಂದು ಕೀರ್ತಿ ಯಾರಿಗಾದರು ಸಲ್ಲಬೇಕಾದರೆ ಹಿಂದಿನ ಸರ್ಕಾರಗಳಿಗೆ ಸಲ್ಲುತ್ತದೆ. ಏಕೆಂದರೆ, ಪೂರ್ವಾಲೋಚನೆ ಇಲ್ಲದೆ, ಯಾವ ರೀತಿ ವಿದ್ಯುತ್ ಬೇಡಿಕೆ ಇದೆ, ನಾವು ಆ ರೀತಿ ಉತ್ಪಾದನೆ ಮಾಡಬೇಕೆನ್ನುವ ಕನಿಷ್ಟ ಒಂದು ಯೋಜನೆ ಇಲ್ಲದೆ ಬೇಕಾಬಿಟ್ಟಿ ನಡೆಸಿದ ಸರ್ಕಾರಗಳ ಪರಿಣಾಮದಿಂದ ನಮ್ಮ ರಾಜ್ಯಕ್ಕೆ ಈ ಸ್ಥಿತಿ ಬಂದಿದೆಯೆ ವಿನ: ನಾವು ಮಾಡಿದಂತ ಅಪರಾದ ಇದಲ್ಲ, ನಮ್ಮ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಹೇಳುತ್ತೇನೆ. ಅಧಿಕಾರಕ್ಕೆ ಬಂದ 6-7 ತಿಂಗಳಲ್ಲಿ 5-6 ಸಾವಿರ ಮೆ.ವ್ಯಾ ವಿದ್ಯುತ್ ಅನ್ನು ಉತ್ಪಾದನೆ ಮಾಡುವಂಥ ಒಪ್ಪಂದಗಳಿಗೆ ಸಹಿ ಹಾಕಿ, ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂಥ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಒಪ್ಪಂದಕ್ಕೆ ಸಹಿ ಹಾಕಿರುವ ಸಂಗತಿ ನಮಗೆಲ್ಲಾ ಗೊತ್ತಿದೆ. ಈ ರೀತಿಯಾಗಿ ರೈತರ ಪರ, ಬಡಜನರ ಪರವಾಗಿರುವ ಈ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ನಾನು ಈ ನಾಡಿನ ಜನತೆಯ ಪರವಾಗಿ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಇನ್ನು ಅನೇಕ ವಿಷಯಗಳನ್ನು ಅವರು ಹೇಳಿದ್ದಕ್ಕೆ ನಾನು ತಿರುಗಿ ಹೇಳಲಾರೆ, ಅವರ ಕಾರ್ಯವೈಖರಿಯ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ಹಿಂದಿನ

ಸರ್ಕಾರಗಳು ಯಾವ ರೀತಿ ಆಡಳಿತ ಮಾಡಿದವು, ಯಾವ ರೀತಿ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದವು ಎನ್ನುವ ಸಂಗತಿಗಳನ್ನು ನಾನು ಹೇಳಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ 2004-8ರವರೆಗೆ 4 ವರ್ಷಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನ ಹಂಚಿಕೆಯಡಿಯಲ್ಲಿ ಸಾಕಷ್ಟು ತಾರತಮ್ಯ ಕಂಡುಬಂದಿದೆ ಎಂಬುದನ್ನು ಇಲ್ಲಿ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಟ್ಟಾರೆ ಈ 4 ವರ್ಷಗಳಲ್ಲಿ ಒದಗಿಸಿದ ಅನುದಾನ 4563 ಕೋಟಿ ರೂಪಾಯಿಗಳು. ಅದರಲ್ಲಿ ದಕ್ಷಿಣ ವಲಯಕ್ಕೆ ಮಾಡಲಾದ ಹಂಚಿಕೆ 3029.80 ಕೋಟಿ ರೂಪಾಯಿಗಳು. ಆದರೆ ಉತ್ತರ ವಲಯಕ್ಕೆ ಮಾಡಲಾದ ಹಂಚಿಕೆ 1533.20 ಕೋಟಿ ರೂಪಾಯಿಗಳು. ಈ ರೀತಿ ತಾರತಮ್ಯ ಮಾಡಿದಂತ ಸರ್ಕಾರವನ್ನು ಹಿಂದೆಂದೂ ನಾವು ನೋಡಿಲ್ಲ. ಇದರಲ್ಲು ಸಹಿತ ಹಾಸನ ಜಿಲ್ಲೆಗೆ ಅತ್ಯಧಿಕ 325.65 ಕೋಟಿ ರೂಪಾಯಿಗಳು ಹಂಚಿಕೆ ಯಾಗಿದೆ. ಆ ಜಿಲ್ಲೆಯಲ್ಲೂ ಕೂಡ ಹೊಳೇನರಸಿಪುರ ತಾಲ್ಲೂಕಿಗೆ ಅತ್ಯಧಿಕ 90.44 ಕೋಟಿ ರೂಪಾಯಿಗಳು ಹಂಚಿಕೆಯಾಗಿದೆ. ರಾಮನಗರ ಜಿಲ್ಲೆಗೆ 217 ಕೋಟಿ ರೂಪಾಯಿಗಳು ಹಂಚಿಕೆಯಾಗಿವೆ. ರಾಮನಗರ ತಾಲ್ಲೂಕಿಗೆ 123.35 ಕೋಟಿ ರೂಪಾಯಿಗಳು ಹಂಚಿಕೆಯಾಗಿವೆ. ಶಿಕಾರಿಪುರ ತಾಲ್ಲೂಕಿಗೆ 33 ಕೋಟಿ 31 ಲಕ್ಷ ರೂಪಾಯಿಗಳ ಅನುದಾನ ಹಂಚಿಕೆಯಾಗಿದೆ. ನಾನು ತಮ್ಮ ಗಮನಕ್ಕೆ ತರಬಯಸುವ ವಿಷಯವಿಷ್ಟೆ, ದಿವಂಗತ ಡಾ॥ ಡಿ.ಎಂ. ನಂಜುಂಡಪ್ಪ ವರದಿಯ ಪ್ರಕಾರ, ಪ್ರಾದೇಶಿಕ ಅಸಮತೋಲನ ನಿವಾರಣೆಗೆ, ಅಭಿವೃದ್ಧಿ ಕಾಮಗಾರಿಗಳಿಗೆ ಹಂಚಿಕೆಯಾಗಿರುವ ಅನುದಾನದ ಪ್ರಮಾಣವನ್ನು ಗಮನಿಸಿದಾಗ, ತಾಲ್ಲೂಕುವಾರು ಆಗಿರುವ ಅಪಾರ ವ್ಯತ್ಯಾಸಗಳು ಗೋಚರಿಸುತ್ತವೆ. ಉದಾಹರಣೆಗೆ ನಾನು ಹೇಳಬಯಸುವುದೇನೆಂದರೆ, ದಿವಂಗತ ಡಾ॥ ಡಿ.ಎಂ. ನಂಜುಡಪ್ಪ ವರದಿಯ ಬಗ್ಗೆ ಸಾಕಷ್ಟು ಸದನದಲ್ಲಿ ಚರ್ಚೆಯಾಗಿದೆ. ದಿವಂಗತ ಡಾ॥ ಡಿ.ಎಂ.ನಂಜುಡಪ್ಪ ವರದಿಯಲ್ಲಿ ಗುರುತಿಸಲಾದ ತಾಲ್ಲೂಕುಗಳಿಗೆ ಯಾವ ರೀತಿ ಹಿಂದಿನ ಸರ್ಕಾರಗಳು ಅನ್ಯಾಯ ಮಾಡಲಾಗಿದ ಎನ್ನುವ ಸಂಗತಿಗಳನ್ನು ನಾನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಅತ್ಯಂತ ಹಿಂದುಳಿದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿಗೆ 17.85 ಕೋಟಿ ರೂಪಾಯಿಗಳನ್ನು, ಬಾಗಲಕೋಟೆಯ ಬೀಳಗಿ ತಾಲ್ಲೂಕಿಗೆ ಕೇವಲ 9 ಕೋಟಿ 46 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಬಾಲ್ಕಿ ತಾಲ್ಲೂಕಿಗೆ 13 ಕೋಟಿ 93 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ.

ರಾಮನಗರ ಹಾಗೂ ಹೊಳೆನರಸೀಪುರ ತಾಲ್ಲೂಕುಗಳಿಗೆ ಮಾಡಲಾದ ಹಣದ ಹಂಚಿಕೆ ಹೋಲಿಸಿದರೆ ಹಿಂದುಳಿದ ತಾಲ್ಲೂಕುಗಳು ಹಾಗೂ ಇತರ ತಾಲ್ಲೂಕುಗಳಿಗೆ ಮಾಡಲಾದ ಹಣದ ಹಂಚಿಕೆಯಲ್ಲಿ ಅಗಾಧ ತಾರತಮ್ಯ ಕಂಡುಬರುತ್ತಿದೆ. ಮಂಡ್ಯ ಜಿಲ್ಲೆಗೆ ಹಂಚಿಕೆಯಾಗಿರುವ ಅನುದಾನ 295.54 ಕೋಟಿ ರೂ. ಹಾಗೂ ತುಮಕೂರು ಜಿಲ್ಲೆಗೆ 253ಕೋಟಿ ರೂ. ಗದಗ್ ಜಿಲ್ಲೆಗೆ 88.45 ಕೋಟಿ ರೂ. ಈ ರೀತಿಯ ವ್ಯತ್ಯಾಸವನ್ನು ನೋಡಿದರೆ ಈ ರಾಜ್ಯವನ್ನು ಒಂದಾಗಿ ಅಳೆಯುವುದಿಲ್ಲ. ಹೀಗೆ ಆಪಾದನೆ ಮಾಡಿರುವಂತಹ ನಾಯಕರು ತಮ್ಮ ಎದೆ ಮುಟ್ಟಿ ನೋಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜ್ಯವನ್ನು ಒಂದು ರೀತಿಯಲ್ಲಿ ನೋಡಿ ಎಲ್ಲಾ ಜಿಲ್ಲೆಗಳಿಗೂ ಕ್ಷೇತ್ರವಾರು ಹಂಚಿಕೆಯನ್ನು ಮಾಡಿರತಕ್ಕಂತಹ ಉದಾಹರಣೆ ಇಲ್ಲ. ಹಿಂದಿನ ಸರ್ಕಾರಗಳು ನಮ್ಮ ಕ್ಷೇತ್ರಗಳಲ್ಲಿ ಒಂದು ರಸ್ತೆಯನ್ನು ಕೂಡ ಸರಿ ಮಾಡಿರುವುದಿಲ್ಲ. ಅಧ್ಯಕ್ಷರೆ, ನಾವು ಅನೇಕ ಉದಾಹರಣೆಗಳನ್ನು ಕೊಡಬಹುದು. KEBಯಲ್ಲಾಗಲಿ ಅಥವಾ KMFನಲ್ಲಾಗಲಿ ನೌಕರಿಗಾಗಿ ತುಂಬಿಕೊಳ್ಳುವಂತಹ ವ್ಯವಸ್ಥೆಯಲ್ಲಿ ಬಹಳ ವ್ಯತ್ಯಾಸಗಳಾಗಿ ಉತ್ತರಕರ್ನಾಟಕಕ್ಕೆ ಅನ್ಯಾಯವಾಗಿದೆ. ಹತ್ತಾರು ಸಾವಿರ ಲೈನ್‌ಮನ್‌ಗಳನ್ನು ತುಂಬುವ ಸಂದರ್ಭದಲ್ಲಿ ಕಾನೂನು ಮೀರಿ ತಮ್ಮ ಭಾಗಕ್ಕೆ ಅನುಕೂಲವಾಗುವ ಹಾಗೆ ಲೈನ್‌ಮನ್‌ಗಳನ್ನು ತುಂಬಿರತಕ್ಕಂತಹ ಉದಾಹರಣೆಗಳನ್ನು ನಾವು ಕಾಣುತ್ತಿದ್ದೇವೆ. ಒಟ್ಟಾರೆಯಾಗಿ ತಾರತಮ್ಯದಿಂದ ಆಡಳಿತ ಮಾಡಿದ ಹಿಂದಿನ ಸರ್ಕಾರಗಳು ಮಾಡಿರುವುದನ್ನು ನಾವು ಕಂಡಿರತಕ್ಕಂತಹ ಸಂದರ್ಭದಲ್ಲಿ ಇವತ್ತು ನಮ್ಮ ನಾಯಕರು ಏನು ಆಡಳಿತ ನಡೆಸುತ್ತಿದ್ದಾರೆ, ಈ ರಾಜ್ಯ ಸರ್ಕಾರ ಉತ್ತಮವಾಗಿ ನಡೆದಿದೆ ಅದರ ಬಗ್ಗೆ ನಾನು ಬಹಳ ಹೆಮ್ಮೆ ಪಡುತ್ತೇನೆ. ವರ್ಗಾವಣೆ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸದಸ್ಯರು ಮಾತನಾಡಿದ್ದಾರೆ. ವರ್ಗಾವಣೆ ವಿಷಯದಲ್ಲಿ ಏನೋ ಅನಾಹುತ ಆದ ಹಾಗೆ ಹೇಳಿದರು. ಆದರೆ ನಮ್ಮ ಅಂಕಿ ಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ.ಏಳು ತಿಂಗಳುಗಳಲ್ಲಿ ಮಾಡಿರತಕ್ಕಂತಹ ವರ್ಗಾವಣೆ ಕೇವಲ 15133.25,000, 44,000, 34,000 24,000ಒಂದೊಂದು ವರ್ಷದಲ್ಲಿ ಎರಡು ಪಟ್ಟು ಮೂರು ಪಟ್ಟು ವರ್ಗಾವಣೆ ಮಾಡಿ ನಮ್ಮ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎನ್ನತಕ್ಕತಹ ಮಾತನ್ನು ನಾನು ಈ ಸದನದ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇನ್ನು ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಬಹಳಷ್ಟು ಚರ್ಚೆ ಆಗಿದೆ. ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಆದರೂ ಸಹಿತ

ಕೆಲವೊಂದು ಸಲಹೆಗಳನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ ಪಡಿತರ ವ್ಯವಸ್ಥೆ ಬಗ್ಗೆ ತಮಗೂ ಗೊತ್ತಿರಬಹುದು ಎಂದು ಕಾಣಿಸುತ್ತದೆ. ನಾನು ಕೇಳಿದ ಹಾಗೆ ಈ ಪಡಿತರ ವ್ಯವಸ್ಥೆಯನ್ನು 2004ರ ಪೂರ್ವದಲ್ಲಿ ಸಂಪೂರ್ಣ ಸರ್ವೆ ಮಾಡಿದ್ದಾರೆ. ಆಗ ಏನು ಅನಾಹುತ ಆಯಿತು ಎಂದರೆ, ನಾವು ಸಹಿತ ನಮ್ಮ ನಮ್ಮ ತಾಲ್ಲೂಕುಗಳಲ್ಲಿ ನೋಡುತ್ತಿದ್ದೇವೆ. ಯಾವ ಆಡಳಿತ ಪಕ್ಷದ ಚುನಾಯಿತ ಸದಸ್ಯರಿಗೆ ಈ ಅಧಿಕಾರವನ್ನು ಕೊಟ್ಟರು ಅವರ ಪಕ್ಷದ ಕಾರ್ಯಕರ್ತರಿಗೆ ಸರ್ವೆ ಮಾಡುವಂತಹ ಅಧಿಕಾರವನ್ನು ಕೊಟ್ಟರು. ಗ್ರಾಮ ಪಂಚಾಯಿತಿ ಸದಸ್ಯರಿಗೆ ನಗರ ಸಭೆ ಸದಸ್ಯರುಗಳಿಗೆ ಅವರ ಪಕ್ಷದ ಮುಖಂಡರುಗಳಿಗೆ ಸರ್ವೆ ಅಧಿಕಾರವನ್ನು ಕೊಟ್ಟದ್ದು ಇಷ್ಟೊಂದು ಅನಾಹುತಗಳಿಗೆ ಕಾರಣವಾಗಿದೆ.ಸರ್ವೇ ಮಾಡಿ ಅದರ ನಂತರ ವಿತರಣೆ ಮಾಡುವ ವ್ಯವಸ್ಥೆ ಅವರ ಕೈಯಿಂದ ಆಗಲಿಲ್ಲ. ಏಕೆಂದರೆ ಅವರಿಗೆ ಗೊತ್ತಿತ್ತು. ನಾವು ಇದರಲ್ಲಿ ವ್ಯತ್ಯಾಸ ಮಾಡಿದ್ದೇವೆ, ನಮ್ಮ ಪಕ್ಷದ ಕಾರ್ಯಕರ್ತರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಬಹಳ ಹಗರಣ ಮಾಡಿದ್ದಾರೆ ಅವರು. ಅಕಸ್ಮಾತ್ ನಾವು ಏನಾದರೂ ಕೊಟ್ಟರೆ ಜೇನುಗೂಡಿಗೆ ಕೈ ಹಾಕಿದ ಹಾಗೆ ಆಗುತ್ತದೆ ಎಂದು ತಿಳಿದುಕೊಂಡು ಅವರು ಅದಕ್ಕೆ ಕೈ ಹಾಕಲಿಲ್ಲ. ಮುಂದಿನ ಸರ್ಕಾರದ ಮೇಲೆ ಬಿಟ್ಟು ಬಿಟ್ಟರು. ಸಮ್ಮಿಶ್ರ ಸರ್ಕಾರ ಇದ್ದಂತಹ ಕಾಲದಲ್ಲಿ ನಾವು ಆ ಕಾರ್ಡ್‌ಗಳನ್ನು ವಿತರಣೆ ಮಾಡುವ ಕೆಲಸಕ್ಕೆ ನಾವು ಕೈ ಹಾಕಿ ಮಾಡಿದ್ದೇವೆ. ಏನಾದರೂ ಒಂದು ನಿರ್ಣಯ ಆಗಲಿ ಎಂದು ಕೈ ಹಾಕಿದ್ದೇವೆ. ಅದು ವ್ಯತ್ಯಾಸವಾಗಿದೆ. ಇಲ್ಲ ಎನ್ನುವ ಹಾಗಿಲ್ಲ. ಮಾನ್ಯ ಹಿರಿಯ ಸದಸ್ಯರು ಮಾತನಾಡಿದ ಪ್ರಕಾರ ಎಪಿಎಲ್ ಕಾರ್ಡ್ ಇರುವಂತಹ ಶ್ರೀಮಂತರಿಗೆ ಬಿಪಿಎಲ್ ಕಾರ್ಡ್‌ಗಳು ದೊರಕಿವೆ. ಬಡವರಿಗೆ ಎಪಿಎಲ್ ಕಾರ್ಡ್‌ಗಳು ದೊರಕಿವೆ. ಈ ಅನಾಹುತ ಆಗಲಿಕ್ಕೆ ಕಾರಣ ಯಾರೆಂದರೆ ಹಿಂದೆ ಸರ್ವೆ ಮಾಡಿದಂತಹ ಪಕ್ಷ ಅದಕ್ಕೆ ಕಾರಣ ಎಂದು ನೇರವಾಗಿ ಈ ಸದನದ ಮುಂದೆ ಆರೋಪ ಮಾಡುತ್ತಿದ್ದೇನೆ. ಆದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನಮ್ಮ ಮಾನ್ಯ ಆಹಾರ ಸಚಿವರು, ನಮ್ಮ ಸಚಿವ ಸಂಪುಟ ಪ್ರಾಮಾಣಿಕವಾಗಿ ಬಡವರಿಗೆ ಏನಾದರೂ ಒಳ್ಳೆಯದು ಮಾಡಬೇಕೆಂಬ ದೃಷ್ಟಿಯಿಂದ ನೆಮ್ಮದಿ ಕೇಂದ್ರದಿಂದ ಅರ್ಜಿಗಳನ್ನು ಪಡೆದ ಬಡವರು ಯಾರಿದ್ದಾರೆ ಅವರಿಗೆ ಕೊಡಬೇಕೆಂಬ ನಿರ್ಣಯವನ್ನು ನಮ್ಮ ಸರ್ಕಾರ ಮಾಡಿದಾಗ . . .

(ಗೊಂದಲ)

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ, ಅವರಿಗೆ ಮಾತನಾಡುವುದಕ್ಕೆ ಬಿಡಿ. ಆ ಮೇಲೆ ಮಾತನಾಡಿ.

ಶ್ರೀ ಸಿದ್ದು ಸವದಿ :- ಮಾನ್ಯ ಉಪಾಧ್ಯಕ್ಷರೆ, ಪ್ರಾಮಾಣಿಕವಾಗಿ ಬಡವರಿಗೆ ರೇಷನ್ ಕಾರ್ಡ್ ಕೊಡಬೇಕೆಂಬ ದೃಷ್ಟಿಯಿಂದ ಸರ್ಕಾರದ ಖಜಾನೆ ಮೇಲೆ ಇನ್ನೊಂದು 3 ರಿಂದ 4 ನೂರು ಕೋಟಿ ರೂಪಾಯಿ ಭಾರ ಬಿದ್ದರೂ ಚಿಂತೆ ಇಲ್ಲ. ಈ ರಾಜ್ಯದ ಬಡವರು ರೇಷನ್‌ನಿಂದ ವಂಚಿತರಾಗಬಾರದು ಎನ್ನತಕ್ಕಂತಹ ಸದುದ್ದೇಶದಿಂದ ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ನೆಮ್ಮದಿ ಕೇಂದ್ರದ ಮುಖಾಂತರ ಅರ್ಜಿ ಪಡೆದು ಇದನ್ನು ಕೊಡುವಂತಹ ವ್ಯವಸ್ಥೆ ಮಾಡಿದ್ದು ಬಹಳ ಸೂಕ್ತ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಯಾರು ನಿಜವಾದ ಕಡುಬಡವರು ಇದ್ದಾರೆ ಅವರು 20 ರೂ. ಬಾಂಡ್ ಮುಖಾಂತರ ತಮ್ಮ ಆಸ್ತಿಯನ್ನು ಘೋಷಣೆ ಮಾಡಿ ನಾವು ಬಡವರಿದ್ದೇವೆ ನಮಗೆ ಕಾರ್ಡ್ ಬೇಕೆಂದು ಅರ್ಜಿಯನ್ನು ಕೊಟ್ಟಾಗ ಅದನ್ನು ಪರಿಶೀಲನೆ ಮಾಡಿ ಕಾರ್ಡ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದು, ಈ ವ್ಯವಸ್ಥೆ ಮಾಡಿದ್ದು ಬಹಳ ಸೂಕ್ತ ಇದೆ. ಅದನ್ನು ಬಿಟ್ಟು statement ಪ್ರಕಾರ photo programme ಮಾಡಿಕೊಡುವುದು 3-4 ತಿಂಗಳು ತಡವಾಗುವುದು ಬೇಡ. ಬಡವರಿಗೆ ವಂಚನೆ ಆಗುವುದು ಬೇಡ ಎನ್ನತಕ್ಕಂತಹ ದೃಷ್ಟಿಯಲ್ಲಿ ಎಲ್ಲರಿಗೂ ಟೆಂಪರರಿ ಕಾರ್ಡ್ ಕೊಡುವಂತಹ ವ್ಯವಸ್ಥೆ ಮಾಡಿರುವುದಕ್ಕಾಗಿ ನಾನು ಈ ರಾಜ್ಯದ ಬಡವರ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆ ಹೇಳುತ್ತೇನೆ. ಅವರೇ ಮಾಡಿರತಕ್ಕಂತಹ ವ್ಯವಸ್ಥೆ ಇದು. ಅದನ್ನು ನಾವು ಸರಿ ಮಾಡುತ್ತೇವೆಂದರೆ strike ಮಾಡುತ್ತಾರೆ. ನಾವು ಸರಿ ಮಾಡಿ ಬಡವರಿಗೆ ಕಾರ್ಡ್ ಕೊಡುತ್ತೇವೆಂದು ಹೇಳಿದರೆ strike ಮಾಡುತ್ತಾರೆ. ಅಂತಹ ಜನ ಇದ್ದಾರೆ. ಬಡವರಿಗೆ ಕಾರ್ಡ್ ಕೊಡಬಾರದು ಎನ್ನುವ ಉದ್ದೇಶ ಇದು. ವಿರೋಧ ಪಕ್ಷದವರಿಗೆ ಈ ಸರ್ಕಾರದ ಮೇಲೆ ಆಪಾದನೆ ಮಾಡುವುದಕ್ಕೆ ಒಂದು ವಿಷಯವೂ ಇಲ್ಲ. ಕ್ಷುಲ್ಲಕ ವಿಷಯಗಳನ್ನು ತೆಗೆದು ಕೆಣಕಿ ಮಾತನಾಡುತ್ತಿದ್ದಾರೆ. ಏಕೆಂದರೆ ಮಾನ್ಯ ಯಡ್ಯೂರಪ್ಪನವರು ಆ ರೀತಿಯ ಒಳ್ಳೆಯ ಆಡಳಿತವನ್ನು ಈ ರಾಜ್ಯದ ಜನತೆಗೆ ಕೊಡುತ್ತಿದ್ದಾರೆ. ವಿರೋಧ ಪಕ್ಷದ ಅನೇಕ ಶಾಸಕರು ನಮ್ಮ ಮುಂದೆ ಮಾನ್ಯ ಯಡ್ಯೂರಪ್ಪನವರಿಗೆ ಹೊಗಳುತ್ತಾರೆ. ಇಲ್ಲಿ ಮಾತ್ರ ತೆಗಳುತ್ತಾರೆ.

ಅಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- ರೇಷನ್ ಕಾರ್ಡ್ ಸಲುವಾಗಿ ನಾವೆಲ್ಲರೂ ಪಣ ತೊಟ್ಟಿದ್ದೇವೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಭೇಟಿ ಮಾಡಿದ್ದೇವೆ. ಯಾರು ಬಡವರಿದ್ದಾರೆ ಅವರಿಗೆ 100ಕ್ಕೆ 100 ರಷ್ಟು ಪಡಿತರ ಚೀಟಿಗಳನ್ನು ಕೊಡುತ್ತೇವೆ.

ಉಪಾಧ್ಯಕ್ಷರು :- ಅವರಿಗೆ ಮಾತನಾಡುವುದಕ್ಕೆ ಬಿಡಿ ದಯವಿಟ್ಟು. ಅವರು ಮುಗಿಸಲಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- ನಮಗೆ ಎಷ್ಟೇ ಭಾರವಾದರೂ ಚಿಂತೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾವೆಲ್ಲಾ ಶಾಸಕರು ಸೇರಿ ವಿನಂತಿ ಮಾಡಿಕೊಂಡಿದ್ದೇವೆ. ರಾಜ್ಯದ ಪ್ರತಿಯೊಬ್ಬ ಬಡವ ಕೂಡ ರೇಷನ್ ಕಾರ್ಡ್‌ನಿಂದ ವಂಚಿತರಾಗದ ಹಾಗೆ ಬರುವಂತಹ ದಿವಸಗಳಲ್ಲಿ ರೇಷನ್ ಕಾರ್ಡ್ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ದುರಸ್ತಿ ಕಾರ್ಯಗಳನ್ನು ನೋಡಿದರೆ ನಮಗೇ ಆಶ್ಚರ್ಯವಾಗುತ್ತದೆ. ಹಿಂದಿನ ಸರ್ಕಾರಗಳ ಬಜೆಟ್ ಘೋಷಣೆ ನೋಡಿದರೆ, ಅವರ ಯೋಜನಾ ವೆಚ್ಚ ನೋಡಿದರೆ ನಮ್ಮ ಸರ್ಕಾರ ಇಂತಹ ಒಂದು ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಹಿತ ದುಪ್ಪಟ್ಟು ಬಜೆಟನ್ನು ಈ ರಾಜ್ಯಕ್ಕೆ ಘೋಷಣೆ ಮಾಡಿರತಕ್ಕಂಥದ್ದನ್ನು ನೋಡಿದರೆ, ಮತ್ತು ಹಲವು ಯೋಜನೆಗಳು, ಒಂದು ಲೀಟರ್ ಹಾಲಿಗೆ ಎರಡು ರೂ. ಸಬ್ಸಿಡಿ ಈ ದೇಶದಲ್ಲಿ ಯಾರೂ ಕೊಟ್ಟಿಲ್ಲ. ನೀವೂ ರೈತ ಕುಟುಂಬದಿಂದ ಬಂದವರಿದ್ದೀರಿ. ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಎರಡು ರೂ. ಸಬ್ಸಿಡಿ ಕೊಟ್ಟ ನಂತರ 10,000 ಲೀಟರ್ ಹಾಲಿನ ಉತ್ಪಾದನೆ ಹೆಚ್ಚಾಗಿದೆ. ಸಣ್ಣ ರೈತರಿಗೆ 1500 ಕೋಟಿ ರೂ. ಕೊಟ್ಟಿರುವುದು ನಿಮಗೆ ಗೊತ್ತಿದೆ. ಈಗಾಗಲೇ 2.5 ಕೋಟಿ ರೂ. ಖರ್ಚಾಗಿದೆ.

ಉಪಾಧ್ಯಕ್ಷರು :- ಅವರು ಮಾತನಾಡಲಿ ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಬ್ರೈನ್ ಮ್ಯಾಪಿಂಗ್ ಮಾಡಿದರೆ ತಿಪ್ಪೇಸ್ವಾಮಿಯವರು ಸತ್ಯ ಹೇಳುತ್ತಾರೆ. ಇಲ್ಲಿ ಹೇಳುತ್ತಿರುವುದೆಲ್ಲಾ ಬರೀ ಸುಳ್ಳೇ.

ಶ್ರೀ ಸಿದ್ದು ಸವದಿ :- ರೈತರಿಗೆ, ಮೀನುಗಾರರಿಗೆ ಮತ್ತು ನೇಕಾರರಿಗೆ 3% ಬಡ್ಡಿಯಲ್ಲಿ ಸಾಲ ನೀಡಿದ್ದಾರೆ. ಖಜಾನೆಯಿಂದ ಸಾವಿರಾರು ಕೋಟಿ ರೂ. ಖರ್ಚಾದರೂ ಚಿಂತೆ ಇಲ್ಲ. ಮಾನ್ಯ ಉಪಾಧ್ಯಕ್ಷರೆ ನನಗೇ ಒಂದು ಆಶ್ಚರ್ಯವಾಗುತ್ತದೆ. ಹಿಂದಿನ ಸರ್ಕಾರಗಳು ವಿಧವಾ ವೇತನ ಕೊಡಲಿಲ್ಲ, ಯಾವ ವಿಧವಾದ ಅಂಗವಿಕಲ ವೇತನ ಕೊಡಲಿಲ್ಲ, ಹಾಲಿಗೆ ಸಬ್ಸಿಡಿ ಕೊಡಲಿಲ್ಲ.

(ಗೊಂದಲ)

ಉಪಾಧ್ಯಕ್ಷರು :-ದಯವಿಟ್ಟು ಕುಳಿತುಕೊಳ್ಳಿ. ಅಭಯಚಂದ್ರರವರೆ, ಪ್ಲೀಸ್ ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :-ಮಾನ್ಯ ಉಪಾಧ್ಯಕ್ಷರೆ, ಈ ಸಭೆಯ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಬಯಸುವುದೇನೆಂದರೆ, ನೀವು ಅಧಿಕಾರದಲ್ಲಿದ್ದಾಗ ನೀವೇಕೆ ಇಂಥ ಯೋಜನೆಗಳನ್ನು ಮಾಡಲಿಲ್ಲ. ನಮ್ಮ ಸರ್ಕಾರ ಭಾಗ್ಯಲಕ್ಷ್ಮಿ ಯೋಜನೆ ಮಾಡಿದೆ. ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ ಎನ್ನುವ ಅಭಿಪ್ರಾಯ ಹಿಂದೆ ಇವರ ಸರ್ಕಾರವಿದ್ದಾಗ ಇತ್ತು. ಆದರೆ ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಮೇಲೆ ಹೆಣ್ಣು ಹುಟ್ಟಿದರೆ ಹೊನ್ನು ಹುಟ್ಟಿದಂತೆ ಎಂದು ಹೇಳುತ್ತಿದ್ದಾರೆ. ಈ ಯೋಜನೆಯ ಪ್ರಕಾರ ಹೆಣ್ಣು ಮಗುವಿಗೆ 18 ವರ್ಷವಾದ ಮೇಲೆ ಒಂದು ಲಕ್ಷ ರೂಪಾಯಿ ಸಿಗುವಂತೆ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಇದು ಎಲ್ಲರೂ ಕೂಡ ಸಂತೋಷ ಪಡುವಂಥ ವಿಷಯವಾಗಿದೆ. ಅದೇ ರೀತಿ ಮಾನ್ಯ ಯಡಿಯೂರಪ್ಪನವರ ಸರ್ಕಾರ 8 ನೇ ಕ್ಲಾಸ್‌ನಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೆ ಸೈಕಲ್ ಕೊಡುವ ಯೋಜನೆಯನ್ನೂ ಕೂಡ ಮಾಡಿದೆ. ಇದೂ ಕೂಡ ಎಲ್ಲರೂ ಸಂತೋಷ ಪಡುವಂಥ ವಿಚಾರವಾಗಿದೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ :- ಉಪಾಧ್ಯಕ್ಷರೆ, ನೀವು ಬೇಕಾದರೆ ಟೇಪ್‌ರೇಕಾರ್ಡರ್ ಹಾಕಿಕೊಂಡು ಕೇಳಿದಂತೆ ಕೇಳಿ. ನಾವೆಲ್ಲರೂ ಆಚೆಗೆ ಹೋಗುತ್ತೇವೆ. ನಾನು ಏನು ಹೇಳುತ್ತೇನೆಂದರೆ,, ,

ಉಪಾಧ್ಯಕ್ಷರು :- ಈಗ ಅವರು ಯೀಲ್ಡ್ ಆಗಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- ಮಾನ್ಯ ಉಪಾಧ್ಯಕ್ಷರೆ, ಈಗ ಎಲ್ಲರಿಗೂ ಆಶ್ಚರ್ಯವಾಗುತ್ತಿದೆ. ಇಷ್ಟೊಂದು ತೀವ್ರಗತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲು ಯಡಿಯೂರಪ್ಪನವರು ಹಣವನ್ನು ಎಲ್ಲಿಂದ ತಂದರು ಎಂದು ಅವರಿಗೆ ಗಾಬರಿಯಾಗಿದೆ. ನನಗೂ ಆಶ್ಚರ್ಯವಾಗಿದೆ. ಹಲವಾರು ರೀತಿಯ ಯೋಜನೆಗಳನ್ನು ತಂದಿದ್ದಾರೆ. ಅದು ರಸ್ತೆ ಅಭಿವೃದ್ಧಿ ಇರಬಹುದು, ನೀರಾವರಿ ಕಾಮಗಾರಿಗಳ ಯೋಜನೆಗಳು, ಹೊಸ ಹೈಸ್ಕೂಲ್‌ಗಳು, ಕಾಲೇಜುಗಳು, ಕಟ್ಟಡಗಳ

ನಿರ್ಮಾಣಕ್ಕೆ ಎಲ್ಲಿಂದ ಬಂತು ಹಣ ಎಂದು ಅವರಿಗೆ ಆಶ್ಚರ್ಯವಾಗಿದೆ. ವಿರೋಧ ಪಕ್ಷದವರ ಕಾಲದಲ್ಲಿ ಹಣ ಏಕೆ ಬರಲಿಲ್ಲ? ನಿಮ್ಮ ಕಾಲದಲ್ಲಿ ಒಂದು ಹೈಸ್ಕೂಲನ್ನು ಕೂಡ ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಕಾಲೇಜುಗಳನ್ನೂ ಕೂಡ ಕೊಡುವುದಕ್ಕೆ ಆಗಲಿಲ್ಲ. ನಾವು ಪದವಿ ಕಾಲೇಜುಗಳನ್ನು ಕೊಟ್ಟಿದ್ದೇವೆ. ಸುಮಾರು ಇಂಜಿನಿಯರಿಂಗ್ ಕಾಲೇಜುಗಳು, ಅವುಗಳಿಗೆ ಕಟ್ಟಡಗಳು, ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲು ಹಣ ಕೊಡಲಾಗಿದೆ. ಮಾನ್ಯ ಯಡಿಯೂರಪ್ಪನವರು ಎಲ್ಲಿಂದ ದುಡ್ಡನ್ನು ತಂದರು. ಮಾನ್ಯ ಯಡಿಯೂರಪ್ಪನವರು ಜಾದು ಮಾಡಿ ಹಣ ತಂದಿರಬೇಕು. ನೀವು ಕೂಡ ಮಾನ್ಯ ಯಡಿಯೂರಪ್ಪನವರು ಮಾಡಿರುವ ಯೋಜನೆಗಳ ಬಗ್ಗೆ ಪ್ರಶಂಸೆ ಮಾಡಬೇಕು. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ,

ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಮೇಲೆ ಒಂದು ಸಾವಿರ ರೈತರನ್ನು ಚೀನಾಕ್ಕೆ ಕಳುಹಿಸಿ ಕೃಷಿ ಬಗ್ಗೆ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟಿತು. ನಾನು ವಿರೋಧ ಪಕ್ಷದ ನಾಯಕರಲ್ಲಿ ಕೇಳುವುದೇನೆಂದರೆ, ನಿಮ್ಮ ಸರ್ಕಾರ 40 ರಿಂದ 50 ವರ್ಷಗಳವರೆಗೆ ಆಡಳಿತದಲ್ಲಿದ್ದಾಗ ಇಂಥ ಯೋಜನೆ ಗಳನ್ನು ಮಾಡಲು ನಿಮಗೆ ನೆನಪು ಆಗಲಿಲ್ಲವೆ? ಇಂಥ ಯೋಜನೆಗಳು ಇವರ ನೆನಪಿಗ ಬರಲಿಲ್ಲ. ಸಂಧ್ಯಾ ಸುರಕ್ಷಾ ಯೋಜನೆಯನ್ನು ಮಾಡಲು ಇವರಿಗೆ ನೆನಪು ಬರಲಿಲ್ಲ. ಅದಕ್ಕಾಗಿಯೇ ನಾನು ಹೇಳುತ್ತಿರುವುದು. ಈ ರೀತಿಯ ಅಭಿವೃದ್ಧಿ ಕೆಲಸಗಳು ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಬಂದಿದ್ದು. ಅದಕ್ಕಾಗಿಯೇ ಈ ರಾಜ್ಯದ ಜನರು ಬಹಳ ಸಂತೋಷ ಪಟ್ಟಿದ್ದಾರೆ. ಅದಕ್ಕಾಗಿಯೇ ಮೊನ್ನೆ ನಡೆದಂಥ ಉಪ ಚುನಾವಣೆಯಲ್ಲಿ ಜನರು ತಮ್ಮ ಜನಾದೇಶವನ್ನು ನಮ್ಮ ಪಕ್ಷಕ್ಕೆ ಕೊಟ್ಟಿದ್ದಾರೆ. ವಿರೋಧ ಪಕ್ಷದವರು ಏನು ಬೇಕಾದ್ದನ್ನು ಹೇಳಲಿ, ನೀವು ಉತ್ತಮರಿದ್ದೀರಿ, ನೀವು ಮುಂದುವರೆಯಬೇಕು ಎನ್ನುವಂಥ ಆದೇಶವನ್ನು ಈ ರಾಜ್ಯದ ಜನ ನಮ್ಮ ಪಕ್ಷಕ್ಕೆ ಕೊಟ್ಟಿದ್ದಾರೆ. ಅದಕ್ಕಾಗಿಯೇ ಈ ಸದನದ ಮೂಲಕ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡುತ್ತೇನೆ. ಈ ಸಂದರ್ಭದಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ನೀವು ನೋಡಿಕೊಂಡು ದಯವಿಟ್ಟು ಮತ್ಸರ ಪಡಬೇಡಿ. ನೀವು ಸಹಕಾರ ಕೊಡಿ. ಆದರ್ಶ ರಾಜ್ಯವನ್ನಾಗಿ ಮಾಡಬೇಕೆನ್ನುವ ನಮ್ಮ ಸರ್ಕಾರಕ್ಕೆ ನೀವು ಸಹಕಾರವನ್ನು ಕೊಡಿ. ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಈ ರಾಜ್ಯದಲ್ಲಿ ಗೃಹ ರಕ್ಷಕ ದಳದಲ್ಲಿ ಕೆಲಸ ಮಾಡುತ್ತಿರುವಂಥವರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಹಲವಾರು

ಸಂದರ್ಭಗಳಲ್ಲಿ ಗಲಭೆಗಳಾದಾಗ, ಮಹಾನ್ ನಾಯಕರುಗಳು ಬಂದಾಗ ಅಥವಾ ಏನಾದರೂ ಅನಾಹುತಗಳಾದಾಗ ಈ ಗೃಹ ರಕ್ಷಕ ದಳದ ಸಿಬ್ಬಂದಿ ತಮ್ಮ ಪ್ರಾಣದ ಹಂಗು ತೊರೆದು ಕೆಲಸವನ್ನು ಮಾಡಿ ಈ ರಾಜ್ಯದಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ರಾಜ್ಯದಲ್ಲಿ ಸುಮಾರು 16 ಸಾವಿರ ಗೃಹ ರಕ್ಷಕ ದಳದ ಸಿಬ್ಬಂದಿಗಳಿದ್ದಾರೆ. ಅವರಿಗೆ ಯಾವ ರೀತಿಯಲ್ಲಿಯೂ ಉತ್ತಮ ಸೌಕರ್ಯಗಳು ಇಲ್ಲ. ಇವರಿಗೆ ಕೊಡತಕ್ಕಂಥ ಭತ್ಯೆ ಬಹಳಷ್ಟು ಕಡಿಮೆ ಇದೆ. ಅದಕ್ಕಾಗಿ ನಾನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಗೃಹ ರಕ್ಷಕ ದಳದವರ ಸೇವೆ ಇವೊತ್ತಿನ ದಿನಗಳಲ್ಲಿ ಬಹಳ ಅವಶ್ಯಕವಿದೆ. ಹಲವಾರು ಸಂದರ್ಭಗಳಲ್ಲಿ, ಅಂದರೆ ಗಲಭೆಗಳಾದಾಗ ಇರಬಹುದು, ಚುನಾವಣೆ ಇರಬಹುದು, ಅನಾಹುತಗಳಾದಾಗ ಇರಬಹುದು, ಬಹಳಷ್ಟು ಸಂದರ್ಭಗಳಲ್ಲಿ ತಮ್ಮ ಪ್ರಾಣವನ್ನು ಬಲಿ ಕೊಟ್ಟು ಕೆಲಸವನ್ನು ಮಾಡಿದ್ದಾರೆ. ನಮ್ಮ ಕ್ಷೇತ್ರದ ಬನಹಟ್ಟಿಯಲ್ಲಿ ನಡೆದ ದೊಡ್ಡ ಜಾತ್ರೆಯಲ್ಲಿ ಜನಗಳ ನೂಕು ನುಗ್ಗಲಲ್ಲಿ ರಥದ ಗಾಲಿಗೆ ಗೃಹ ರಕ್ಷಕ ದಳದ ಅಮಾಯಕ ಸಿಬ್ಬಂದಿಯೊಬ್ಬ ಸಿಕ್ಕಿಕೊಂಡು ಪ್ರಾಣವನ್ನು ಕಳೆದುಕೊಂಡ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಾಗ ತಕ್ಷಣ ಮುಖ್ಯಮಂತ್ರಿಗಳು ಸ್ಪಂದಿಸಿ ಆ ಸಿಬ್ಬಂದಿಯ ಕುಟುಂಬಕ್ಕೆ ಎಂಟು ದಿವಸಗಳೊಳಗೆ ಮೂರು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಡುವಂತೆ ಆದೇಶವನ್ನು ಮಾಡಿದರು. ಅವರಿಗೆ ನಾನು ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂಥ ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ಗೃಹ ರಕ್ಷಕ ದಳದ ಸಿಬ್ಬಂದಿಗೆ ಕನಿಷ್ಟ ಎರಡು ಸಾವಿರ ರೂಪಾಯಿಗಳ ಗೌರವಧನವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಈಗಾಗಲೇ ನಮ್ಮ ಮುಂದಿರತಕ್ಕಂಥ ಅಂಕಿ ಸಂಖ್ಯೆಗಳನ್ನು ನೋಡಿದರೆ ಈ ಏಳು ತಿಂಗಳ ಅವಧಿಯಲ್ಲಿ ಬನಹಟ್ಟಿಯಲ್ಲಿ, ಅಥಣಿಯಲ್ಲಿ ಬಹಳಷ್ಟು ಪ್ರಗತಿಯಲ್ಲಿ ಕೆಲಸಗಳು ಆಗುತ್ತಿವೆ. ಆದರೂ ಕೂಡ ಈ ಪ್ರಗತಿಯನ್ನೂ ಇನ್ನಷ್ಟು ವೇಗ ಮಾಡುವುದಕ್ಕೆ ನಾನು ಸಂಬಂಧಪಟ್ಟ ಸಚಿವರುಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗಾಗಲೇ ಬಜೆಟ್‌ನಲ್ಲಿ ಮಂಜೂರು ಮಾಡಿರತಕ್ಕಂಥ ಕಾಮಗಾರಿ ಯೋಜನೆಗಳಲ್ಲಿ ತುರ್ತಾಗಿ ಟೆಂಡರ್‌ಗಳನ್ನು ಕರೆಯಲು ನಿರ್ದೇಶನವನ್ನು ಕೊಟ್ಟು ಆದಷ್ಟು ಬೇಗನೆ ಈ ಕೆಲಸಗಳನ್ನು ಮಾಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಇನ್ನು ಕೇ-ಶಿಪ್ ರಸ್ತೆಗಳಲ್ಲಿ ಉತ್ತರ ಕರ್ನಾಟಕ

ಭಾಗಕ್ಕೆ ಹಿಂದಿನ ಸರ್ಕಾರದಲ್ಲಿ ಬಹಳ ಅನ್ಯಾಯವಾಗಿದೆ. ಏಕೆಂದರೆ ಕೇ-ಶಿಪ್ ರಸ್ತೆಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿಯೇ ಹೆಚ್ಚು ಮಾಡಿ ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯ ಮಾಡಿದ್ದಾರೆ. ಆದುದರಿಂದ ಈ ಸಲ ಮತ್ತು ಬರುವಂಥ ಬಜೆಟ್‌ನಲ್ಲಿ ಕೇ-ಶಿಪ್ ರಸ್ತೆಗಳಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚಿನ ರಸ್ತೆಗಳನ್ನು ಮಾಡಲು ಹೆಚ್ಚು ಹಣವನ್ನು ಬಜೆಟ್‌ನಲ್ಲಿಡಬೇಕೆಂದು ವಿನಂತಿ ಮಾಡುತ್ತೇನೆ.

ಈಗಾಗಲೇ ಗಮನ ಸೆಳೆಯುವ ಸೂಚನೆಯ ಮೂಲಕ ಕೇಳಿರುವಂತೆ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಸಾಕಷ್ಟು ಜಮೀನುಗಳಿಗೆ ತೊಂದರೆಯಾಗಿದೆ. ಅದರ ಜೊತೆ ಸಾಕಷ್ಟು ಜಮೀನುಗಳು ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ನಮ್ಮ ಜಗಳೂರು ಕ್ಷೇತ್ರದಲ್ಲಿ ಸಾಕಷ್ಟು ಜಮೀನು ಜವಳು, ಜವಳಾಗಿದೆ. ಸಾಕಷ್ಟು ಅನಾಹುತ ಜಮೀನುಗಳಿಗಾಗಿದೆ. ಈಗಾಗಲೇ ಇನ್ನೂ ಹೆಚ್ಚುವರಿಯಾಗಿ ನೀರಾವರಿಯಾಗುತ್ತಿದ್ದ 850 ಎಕರೆ ಜಮೀನುಗಳಿಗೆ ಸಂಬಂಧಪಟ್ಟಂತೆ ಪರಿಹಾರವನ್ನು ಇನ್ನೂ ಕೊಡಬೇಕಾಗಿದೆ. ಆದಷ್ಟು ಬೇಗ ಪರಿಹಾರವನ್ನು ಕೊಡಬೇಕು. ಅದರ ಜೊತೆಗೆ ಮುಳುಗಡೆಯಾಗುವ ಹಳ್ಳಿಗಳವರಿಗೆ ಪುನರ್ವಸತಿ ಕಾರ್ಯವೇನಾಗುತ್ತಿದೆ ಅದು ವಿಳಂಬವಾಗಿ ಮಂದಗತಿಯಲ್ಲಿ ಕೆಲಸ ನಡೆದಿದೆ. ಅದನ್ನೂ ಕೂಡ ತೀವ್ರಗತಿಯಲ್ಲಿ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಡ್ಯಾಂ ಸಲುವಾಗಿ ಅಥಣಿ ತಾಲ್ಲೂಕಿನಲ್ಲಿ ರೈತರ ಬಹಳಷ್ಟು ಜಮೀನು ಗಳು ಬರಡಾಗಿದೆ. ಇದಕ್ಕಾಗಿ ಈಗಾಗಲೇ ಸರ್ಕಾರ ಒಂದು ವಿಶೇಷ ಪ್ಯಾಕೇಜ್ ಮುಖಾಂತರ ಆ ಜಮೀನು ಗಳನ್ನು ಸುಧಾರಣೆ ಮಾಡುವುದಕ್ಕೆ, ಡ್ರೈನೇಜ್ ಮಾಡುವುದಕ್ಕೆ ವ್ಯವಸ್ಥೆಮಾಡಬೇಕು. ಸುಧಾರಣೆಯನ್ನು ಮಾಡಲಾಗದಂಥ ಪಕ್ಷದಲ್ಲಿ ಅಂಥ ಜಮೀನುಗಳನ್ನು ಸರ್ಕಾರವೇ ವಶಪಡಿಸಿಕೊಂಡು ಪರಿಹಾರ ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ಇನ್ನು ಬನಹಟ್ಟಿಯಲ್ಲಿ ಕುಡಿಯುವ ನೀರಿನ ಸಲುವಾಗಿ ಹಾಕಿರತಕ್ಕಂಥ ಪೈಪ್‌ಲೈನ್‌ಗಳು ಸುಮಾರು 45 ವರ್ಷಗಳ ಹಿಂದೆ ಹಾಕಿರತಕ್ಕಂಥದ್ದಾಗಿದೆ. ಅದನ್ನು ಬದಲಾವಣೆ ಮಾಡಬೇಕು.

45 ವರ್ಷಗಳ ಹಿಂದೆ ಮಾಡಿರತಕ್ಕ ಪೈಪ್‌ಲೈನ್ ಇದೆ, ಅದನ್ನು ಬದಲಾವಣೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸುರೇಶ್ ಕುಮಾರ್‌ರವರು ಈ ವರ್ಷದ ಬಜೆಟ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಕೂಡ ಈ ಬಜೆಟ್‌ನಲ್ಲಿ ಸೇರಿಸಿ ಬನಹಟ್ಟಿ ಮಹಾನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇನ್ನು ಆಶ್ರಯ ಮನೆಗಳನ್ನು

ನಮ್ಮ ಸರ್ಕಾರ ಈಗಾಗಲೇ ಸಾಕಷ್ಟು ಕೊಟ್ಟಿದೆ. ಸುಮಾರು ಎರಡೂವರೆ ಲಕ್ಷ, ಇಲ್ಲಿ ಅಂಕಿಸಂಖ್ಯೆಗಳು ಇವೆ..

(ಗೊಂದಲ)

ಉಪಾಧ್ಯಕ್ಷರು :- ಅವರು ಮಾತನಾಡಲಿ, ನೀವು ಮಾತನಾಡುವಾಗ ಹೇಳಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಉಪಾಧ್ಯಕ್ಷರೇ, ನಿಮ್ಮ ಮುಂದೆ ಸುಳ್ಳು ಹೇಳುತ್ತಾರೆ. ಬೇರೆ ಯಾರದಾದರೂ ಮುಂದೆ ಸುಳ್ಳು ....

(ಗೊಂದಲ)

ಉಪಾಧ್ಯಕ್ಷರು :- ನೀವು ಮಾತನಾಡುವಾಗ ಹೇಳಿ. ಅವರು ಮೊದಲು ಮಾತನಾಡಲಿ, ಅವರು yield ಆಗಿಲ್ಲ. ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- ನಾನು ಅದರ ಅಂಕಿಸಂಖ್ಯೆಗಳನ್ನು ಹೇಳುತ್ತೇನೆ ತಾಳಿ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗಮದಿಂದ 5,56,549 ನಿರ್ಮಾಣ ಹಂತದಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇವುಗಳಲ್ಲಿ ದಿನಾಂಕ 30-11-08 ರವರೆಗೆ 1,88,280, ಮನೆಗಳು ಪೂರ್ಣಗೊಂಡಿವೆ. ಈ ವರ್ಷ 2,89,000 ಮನೆಗಳನ್ನು ಹೊಸದಾಗಿ ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ. ಪ್ರಸಕ್ತ ವರ್ಷ ನಿಗಮ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 2,000,00 ಮನೆಗಳ ಪೈಕಿ 5,628 ಗ್ರಾಮ ಪಂಚಾಯಿತಿಗಳಿಗೆ ತಲಾ 25 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

(ಗೊಂದಲ)

ಏಕೆ ಸುಳ್ಳು ಹೇಳುತ್ತೀರಿ, ನಿಮ್ಮ ಗ್ರಾಮದಲ್ಲಿ ಕೂಡ ಬಂದಿವೆ. ಅದರ ಜೊತೆಗೆ ನಮ್ಮ ಸರ್ಕಾರ ಉತ್ತರ ಕರ್ನಾಟಕಕ್ಕೆ ಕೊಟ್ಟಿರುವಂತಹ ಸೌಲಭ್ಯಗಳನ್ನು ಇವರಿಗೆ ಸ್ವಲ್ಪ ನೆನಪು ಮಾಡಿಕೊಡುತ್ತೇನೆ. ಉತ್ತರ ಕರ್ನಾಟಕದಲ್ಲಿ ಉನ್ನತ ಶಿಕ್ಷಣಕ್ಕೆ ವಿಶೇಷ ಗಮನವನ್ನು ನಮ್ಮ ಸರ್ಕಾರ ಕೊಟ್ಟಿದೆ. ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ ಕಾನೂನು ವಿಶ್ವವಿದ್ಯಾಲಯ ಪ್ರಾರಂಭ ಮಾಡಿದ್ದು, ಈ ರೀತಿಯಾಗಿ ಅನೇಕ ಕೆಲಸಗಳನ್ನು ಮಾಡುವುದರ ಮುಖಾಂತರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ನಮ್ಮ ಸರ್ಕಾರ ಸ್ಪಂದನೆ

ಮಾಡುತ್ತಿದೆ. ನಮ್ಮ ಸರ್ಕಾರದಲ್ಲಿ ಒಂದು ವಿನಂತಿ ಏನೆಂದರೆ ನಾನು ಈಗಾಗಲೇ ಹೇಳಿದ ಪ್ರಕಾರ ನನ್ನ ಕ್ಷೇತ್ರ ನಗರ ಪ್ರದೇಶದಲ್ಲಿರುವುದರಿಂದ, ನಗರದಲ್ಲಿ ಸಹ ಆಶ್ರಯ ಇಲ್ಲದೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಯಾವ ರೀತಿ ಗ್ರಾಮೀಣ ಪ್ರದೇಶದಲ್ಲಿ ಆಶ್ರಯ ಮನೆಗಳನ್ನು ಕೊಟ್ಟಿದ್ದೀರಿ, ಅದೇರೀತಿ ನಗರ ಪ್ರದೇಶಕ್ಕೂ ಕೂಡ ಆಶ್ರಯ ಮನೆಗಳನ್ನು ಕೊಡಬೇಕು ಎಂದು ವಿನಂತಿ ಮಾಡುತ್ತೇನೆ.

ನಮ್ಮ ಸರ್ಕಾರ ವಿಶೇಷವಾಗಿ ನೀರಾವರಿಗೆ ಹೆಚ್ಚು ಒತ್ತು ಕೊಟ್ಟಿದೆ. ಅದರಲ್ಲೂ ವಿಶೇಷವಾಗಿ ಮಾನ್ಯ ಬೊಮ್ಮಾಯಿ ಸಾಹೇಬರು ಮಂತ್ರಿಗಳಾದ ನಂತರ ನಮ್ಮ ಭಾಗದಲ್ಲಿರುವಂತಹ ಆಲಮಟ್ಟಿ, ದಂಡಾವತಿ, ಯಾವುದೇ ಒಂದು ನೀರಾವರಿ ಯೋಜನೆ ಇದ್ದರೂ ಕೂಡ ಹೆಚ್ಚಿನ ಮುತುವರ್ಜಿ ವಹಿಸಿ ಅಭಿವೃದ್ಧಿಗೆ ಗಮನಹರಿಸಿರುವುದು ಬಹಳ ಸಂತೋಷ. ನನ್ನ ಜಿಲ್ಲೆಯಲ್ಲಿ ನಾಲ್ಕು ಮತ ಕ್ಷೇತ್ರಗಳಿಗೆ ಒಳಪಟ್ಟಂತಹ ಚಿಮ್ಮಲಗಿ ಏತ ನೀರಾವರಿ ಬಹಳ ಅವಶ್ಯ ಇದೆ. ಅಲ್ಲಿ ಏತ ನೀರಾವರಿ ಆದರೆ ಅದರಿಂದ ಸಾವಿರಾರು ಎಕರೆಗೆ ನೀರು ಕೊಡುವಂತಹ ವ್ಯವಸ್ಥೆಯಾಗುತ್ತದೆ. ಮಳೆಗಾಲದಲ್ಲಿ flow ಆಗುವಂತಹ ಸಂದರ್ಭದಲ್ಲಿ ನಾಲ್ಕು ತಿಂಗಳಿಗೆ ನೀರನ್ನು ಉಪಯೋಗ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗು ನೀರಾವರಿ ಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ ಈಗ ಬರುವಂತಹ ಬಜೆಟ್‌ನಲ್ಲಿ ಆ ಏತ ನೀರಾವರಿಯನ್ನು ಸೇರಿಸಿಕೊಳ್ಳಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ನನ್ನ ಮತಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ನೇಕಾರ ವೃತ್ತಿಯಲ್ಲಿ ಅವಲಂಬಿತರಾಗಿರುವುದರಿಂದ ಹಾಗೂ ಬಡ ನೇಕಾರರು ನಗರ ಪ್ರದೇಶದಲ್ಲಿ ಇರುವುದರಿಂದ, ಆ ನಗರವನ್ನು ಅಭಿವೃದ್ಧಿ ಪಡಿಸುವುದಕ್ಕೆ, ಅಲ್ಲಿರುವಂತಹ ನೇಕಾರರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಒಂದು ವಿಶೇಷ ಯೋಜನೆ ಮುಖಾಂತರ ನನ್ನ ಕ್ಷೇತ್ರದ ಮಾಲಂಗಿಪುರ ಇರಬಹುದು, ತೇರದಾಳ ಇರಬಹುದು, ಬನಹಟ್ಟಿ ಇರಬಹುದು, ಆ ಬಡ ನೇಕಾರರು ವಾಸ ಮಾಡುವಂತಹ ಪಟ್ಟಣಗಳನ್ನು ಇನ್ನು ಮೇಲ್ದರ್ಜೆಗೇರಿಸಬೇಕೆಂದು ವಿನಂತಿ ಮಾಡುತ್ತೇನೆ. ಅದರ ಜೊತೆಗೆ ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು SFC ಅನುದಾನದಲ್ಲಿ ಸಾಕಷ್ಟು ಅನುದಾನವನ್ನು ನಮ್ಮ ನಗರಕ್ಕೆ ಕೊಟ್ಟಿದ್ದಾರೆ. ಅದಕ್ಕೋಸ್ಕರ ನಮ್ಮ ಕ್ಷೇತ್ರದ ಜನತೆಯ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಹೇಳಬಯಸುತ್ತೇನೆ. ಇನ್ನು ಕೊನೆಯದಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಗಮನ ಕೊಡುವುದಕ್ಕೆ

ಅಧಿವೇಶನ ಪ್ರಾರಂಭವಾಗಿದೆ. ಅದೂ ಅಲ್ಲದೆ ಈ ಭಾಗದ ಗಡಿ ಪ್ರದೇಶದ ಜನರಿಗೆ ಬೆಂಬಲ ಕೊಡುವುದಕ್ಕೆ ನಮ್ಮ ಸರ್ಕಾರ ಅಭಯ ಹಸ್ತದ ರೂಪದಲ್ಲಿ ಅಧಿವೇಶನ ನಡೆಸುತ್ತಿರುವುದು ಒಂದು ಸಂತೋಷದ ಸಂಗತಿ.

ಆಗ ಮಾನ್ಯ ಯಡಿಯೂರಪ್ಪನವರು ಇದ್ದರು, ನೀವು ಒಬ್ಬರೇ ಮಾಡಿರಲಿಲ್ಲ, ನಾವು ಇದ್ದೆವು. ಈ ಅಧಿವೇಶನದ ಉಪಯೋಗ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಭಾಗಕ್ಕೆ ಆಗಬೇಕು. ವಿಶೇಷವಾಗಿ ನಮ್ಮ ಇಡೀ ಬಾಗಲಕೋಟೆ ಜಿಲ್ಲೆಗೆ ಉಪಯೋಗವಾಗುವಂತಹ ಒಂದು ಸಂಗತಿ ಎಂದರೆ ಕುಡುಚಿ-ಬಾಗಲಕೋಟೆ ರೈಲ್ವೆ ಲೈನ್. ಬ್ರಿಟಿಷರ ಆಡಳಿತ ಇದ್ದಾಗ ಇದಕ್ಕೆ ಸರ್ವೆ ಆಗಿದ್ದು, ಹಿಂದಿನ ರೈಲ್ವೆ ಸಚಿವರಾದ ಮಾನ್ಯ ಜಾಫರ್ ಷರೀಫ್‌ರವರು ಇದ್ದಂತಹ ಸಂದರ್ಭದಲ್ಲಿ ಸರ್ವೆ ಮಾಡಿ, ಅದನ್ನು ಉದ್ಘಾಟನೆ ಮಾಡಿರುವಂತಹ ಸಂಗತಿ ಇಂದಿನ ಇತಿಹಾಸದಲ್ಲಿರುವುದರಿಂದ, ನಮ್ಮ ಜನರಿಗೆ, ನಮ್ಮ ಭಾಗದಲ್ಲಿರುವಂತಹ ಸಕ್ಕರೆ ಮತ್ತು ಸಿಮೆಂಟ್ ಫ್ಯಾಕ್ಟರಿಯವರಿಗೆ ಬಹಳಷ್ಟು ಉಪಯೋಗವಾಗುವಂತಹ ಲೈನ್ ಆಗಿರುವುದರಿಂದ ದಯವಿಟ್ಟು ನಮ್ಮ ಪಾಲಿನ ಹಣವನ್ನು ಕೇಂದ್ರ ಸರ್ಕಾರಕ್ಕೆ ತೆಗೆದಿಟ್ಟು, ಕುಡುಚಿ-ಬಾಗಲಕೋಟೆ ರೈಲ್ವೆ ಲೈನ್‌ಗೆ ಈ ಬಜೆಟ್‌ನಲ್ಲಾಗಲಿ ಅಥವಾ ಮುಂದಿನ ದಿನಗಳಲ್ಲಿ ಹಣಕಾಸಿನ ಪರಿಸ್ಥಿತಿ ಸುಧಾರಣೆ ಆದನಂತರ ಆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬಯಸುತ್ತೇನೆ. ಒಟ್ಟಾರೆ ನಮ್ಮ ಸರ್ಕಾರ ಈ ಏಳು ತಿಂಗಳಲ್ಲಿ ಬಹಳಷ್ಟು ಸುಧಾರಣೆ ಹಾಗೂ ಅಭಿವೃದ್ಧಿ ಕೆಲಸಗಳನ್ನು ನಮ್ಮ ಭಾಗದಲ್ಲಿ ಮಾಡಿದೆ. ಮಾನ್ಯ ವಿರೋಧ ಪಕ್ಷದವರು ಸಹಕಾರ ಕೊಟ್ಟರೆ, ನಿಶ್ಚಿತವಾಗಿ ನನಗೆ ವಿಶ್ವಾಸ ಇದೆ, ಈ ರಾಜ್ಯ ಆದರ್ಶ ರಾಜ್ಯವಾಗುವುದಕ್ಕೆ, ನಾವು ನೀವು ಸೇರಿ ಈ ದೇಶದಲ್ಲಿ ನಂಬರ್ 1 ರಾಜ್ಯ ಎನ್ನುವ ಹಾಗೆ ಈ ಕರ್ನಾಟಕ ರಾಜ್ಯವನ್ನು ರಾಮರಾಜ್ಯವನ್ನಾಗಿ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಬೆಳಿಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಹಿರಿಯ ಸಚಿವರು ಮಾತನಾಡಿದರು. ಬೆಳಿಗ್ಗೆ ಬಹಳ ಗಂಭೀರವಾಗಿ ಗಣಿಗಾರಿಕೆ ವಿಚಾರ ಚರ್ಚೆಯಾಯಿತು. ನನಗೆ ಆಶ್ಚರ್ಯವಾಗುತ್ತದೆ. ಏನೆಂದರೆ ಒಂದು ಸುಳ್ಳನ್ನು ಹತ್ತು ಬಾರಿ ಹೇಳದರೆ ಅದು ನಿಜವಾಗುತ್ತದೆ ಏನು? ನಿಜವಾಗುವುದಿಲ್ಲ. ನೀವು ನಿಜವಾಗಿ ಒಪ್ಪಿಕೊಳ್ಳಿರಿ. ಎದೆ ಮುಟ್ಟಿ ನೋಡಿಕೊಳ್ಳಿರಿ. ಈ ಗಣಿಗಾರಿಕೆ ಯಾವಾಗ ಪ್ರಾರಂಭವಾಯಿತು?

ಉಪಾಧ್ಯಕ್ಷರು :- ಅವರು yield ಆಗಿಲ್ಲ, ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ? ಅವರು ಮಾತನಾಡಲಿ.

ಶ್ರೀ ಎ.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, Time pass ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅವರು ಗಂಭೀರವಾಗಿ ಮಾತನಾಡಲಿ. ಅವರು ಚರ್ಚೆ ಮಾಡುವ ಹಾಗಿದ್ದರೆ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಚರ್ಚೆ ಮಾಡಲಿ.

ಉಪಾಧ್ಯಕ್ಷರು :- ಅವರು time pass ಮಾಡುವುದಕ್ಕೆ ನಿಂತುಕೊಂಡಿರುವುದಲ್ಲ, ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುತ್ತಾರೆ.

ಶ್ರೀ ಸಿದ್ದು ಸವದಿ :- ಈ ಗಣಿಗಾರಿಕೆ ಯಾವಾಗ ಪ್ರಾರಂಭವಾಯಿತು? ಆಗ ಯಾರು ಅಧಿಕಾರದಲ್ಲಿದ್ದರು? ಆಗ ಲೈಸೆನ್ಸ್ ಕೊಟ್ಟರಲ್ಲ, ಯಾರಿಗೆ ಕೊಟ್ಟರು ಎನ್ನುವುದು ಅವರಿಗೆ ಗೊತ್ತು ವಿನ: ನಾವು ಐದಾರು ತಿಂಗಳಿನಲ್ಲಿ ಬಂದವರಿಗೆ ಕೇಳಿದರೆ ಅದು ಸರಿಯಲ್ಲ ಎಂದು ಅನಿಸುತ್ತದೆ. ನಮ್ಮ ಸರ್ಕಾರ ಬಂದ ಆರೇಳು ತಿಂಗಳಿನಲ್ಲಿ ಗಣಿಗಾರಿಕೆ ವಿಚಾರದಲ್ಲಿ ಮಾಡಿರತಕ್ಕಂಥ ಎಲ್ಲಾ ತಪ್ಪುಗಳನ್ನು ನಮ್ಮ ಮೇಲೆ ಹೊರಿಸುವುದಕ್ಕೆ ಬಂದಿದ್ದಾರೆ. ಅದನ್ನು ಜನ ನಂಬುವುದಿಲ್ಲ. ಈಗಾಗಲೇ ಜನ ಬೈ ಎಲೆಕ್ಷನ್‌ನಲ್ಲಿ ಉತ್ತರವನ್ನು ಕೊಟ್ಟುಬಿಟ್ಟರು. ಜನರಿಗೆ ತಕ್ಕಂತಹ ರೀತಿಯಲ್ಲಿ ತಾವು ಮಾತನಾಡಬೇಕು. ಅಂಕಿ ಸಂಖ್ಯೆಗಳನ್ನು ಹೇಳುವುದಾದರೆ ಮಾನ್ಯ ಧರ್ಮ್‌ಸಿಂಗ್‌ರವರು ಇದ್ದಂತಹ ಕಾಲದಲ್ಲಿ 1,500 ಕ್ಕೂ ಮೇಲ್ಪಟ್ಟು ಗಣಿಗಾರಿಕೆಗೆ ಲೈಸೆನ್ಸ್ ಕೊಟ್ಟಿದ್ದರು. ಮಾನ್ಯ ಕುಮಾರಸ್ವಾಮಿಯವರು ಇದ್ದಂತಹ ಕಾಲದಲ್ಲಿ 3,000ಕ್ಕೂ ಮೇಲ್ಪಟ್ಟು ಗಣಿಗಾರಿಕೆಗೆ ಲೈಸೆನ್ಸ್ ಕೊಟ್ಟಿದ್ದರು. ಆದರೆ ಮಾನ್ಯ ಯಡಿಯೂರಪ್ಪನವರು ಗಣಿಗಾರಿಕೆಗೆ ಒಂದೇ ಒಂದು ಲೈಸೆನ್ಸ್ ಅನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಇವತ್ತು ಗಣಿಗಾರಿಕೆ ವಿಷಯವಾಗಿ ನಿಲುವಳಿ ಸೂಚನೆಯನ್ನು ತಂದಿದ್ದರು. ತಾವು ಅದಕ್ಕೆ ಬೇರೆ ಸಮಯವನ್ನು ನಿಗದಿ ಮಾಡುತ್ತೇನೆಂದು ಹೇಳಿದ್ದೀರಿ. ಆ ಸಂದರ್ಭದಲ್ಲಿ ಅವರು ಎಲ್ಲಾ ಮಾಹಿತಿಗಳನ್ನು ಸಭೆಯ ಮುಂದೆ ಇಡಲಿ. ಈಗ ರಾಜ್ಯಪಾಲರ ಭಾಷದ ಮೇಲೆ ಚರ್ಚೆಯನ್ನು ಮಾಡಲಿ. ಈಗಾಗಲೇ ತಾವು ಇದಕ್ಕೆ ಸಮಯವನ್ನು ನಿಗದಿ ಮಾಡುತ್ತೇನೆಂದು ಹೇಳಿರುವುದರಿಂದ ಗಣಿಗಾರಿಕೆಗೆ ಸಂಬಂಧಪಟ್ಟಹಾಗೆ ಮಾನ್ಯ

ಧರ್ಮಸಿಂಗ್‌ರವರ ಕಾಲದಿಂದಲೂ ಬೇಕಾದರೆ ಚರ್ಚೆಯನ್ನು ಮಾಡೋಣ. ನಾವು ಹೆದರಿಕೊಂಡು ಸದನದಿಂದ ಹೋಗುವಂಥ ಪ್ರಶ್ನೆ ಇಲ್ಲ. ನಾವು ಸದನದಲ್ಲೆ ಕುಳಿತು ನಿಮ್ಮನ್ನು ಹೆದರಿಸುವುದಕ್ಕೆ ಸಿದ್ಧರಿದ್ದೇವೆ. ನೀವು ಸಮಯವನ್ನು ಕೊಟ್ಟರೆ ಚರ್ಚೆಯನ್ನು ಮಾಡೋಣ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ನಾವು ಏಕೆ ಹೆದರುತ್ತೇವೆ, ನಾವು ಏನೂ ಹೆದರುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಸಿ.ಬಿ.ಐ. ತನಿಖೆಗೆ ಕೊಡಿ, ತೀರ್ಮಾನವಾಗಲಿ.

ಅಧ್ಯಕ್ಷರು :- ಮಾನ್ಯ ಬಾಲಕೃಷ್ಣರವರೆ ಕುಳಿತುಕೊಳ್ಳಿ, ರೇಣುಕಾಚಾರ್ಯ ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- ಮಾನ್ಯ ಅಧ್ಯಕ್ಷರೆ, ಹಿಂದೆ ಸದನದಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಎಷ್ಟೆಷ್ಟು ಆರೋಪಗಳಾಗಿದೆಯೆಂಬುದು ತಮಗೆಲ್ಲಾ ಗೊತ್ತಿದೆ. ಆ ಎಲ್ಲಾ ತಪ್ಪುಗಳನ್ನು ನಮ್ಮ ಮೇಲೆ ಹಾಕುವುದಕ್ಕೆ ಬರುತ್ತೀರಿ. ಅದು ನೀವು ಮಾಡಿದ ಕೃತ್ಯ, ನೀವು ಲೈಸನ್ಸ್ ಕೊಟ್ಟಿದ್ದೀರಿ. ನಿಮ್ಮವರಿಗೆ ಲೈಸನ್ಸ್ ಕೊಟ್ಟಿದ್ದೀರಿ, ನೀವು "ಲೂಟಿ" ಮಾಡಿದಿರಿ. ಅದಕ್ಕಾಗಿ ಪುನ: ಆ ತಪ್ಪನ್ನು ನಮ್ಮ ಮೇಲೆ ಹಾಕುವಂಥ ವ್ಯವಸ್ಥೆ ಆಗಬಾರದು. ಗಣಿಗಾರಿಕೆ ಬಗ್ಗೆ ಲೋಕಾಯುಕ್ತರು ಏನು ತನಿಖೆಯನ್ನು ಮಾಡಿದ್ದಾರೆ.

ಅಧ್ಯಕ್ಷರು :- ಮಾನ್ಯ ಸಿದ್ದು ಸವದಿಯವರೇ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸದನದೊಳಗೆ ಮಾತನಾಡುವಾಗ "ಲೂಟಿ" ಎನ್ನುವ ಪದವನ್ನು ಬಳಸಿದ್ದಾರೆ. ಯಾರ್‍ಯಾರು ಲೂಟಿ ಮಾಡಿದ್ದಾರೆಂಬ ಬಗ್ಗೆ ಚರ್ಚೆಯಾಗಬೇಕೆಂದರೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಸದನದೊಳಗೆ ಮಾತನಾಡುವಾಗ ಲಂಗು ಲಗಾಮು ಇರಬೇಕು. ಇದು ಏನು ಪಂಚಾಯತಿ ಸಭೆಯೋ ಅಥವಾ ಸದನವೋ?

ಶ್ರೀ ಎಂ.ಪಿ. ರೇಣುಕಾಚಾರ್ಯ :- ಯಾರಿಗೆ ಲಂಗು ಲಗಾಮು ಇರಬೇಕು ಕೇಳಿ. ಇವರಿಗೆ ಲಂಗು ಲಗಾಮು ಇದೆಯಾ, ಇವರೇ ಮಧ್ಯದಲ್ಲಿ ಅರ್ಧ ಗಲಾಟೆ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಮಾನ್ಯ ಸಿದ್ದು ಸವದಿಯವರೇ.. .. ..

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಲೂಟಿ ಹೊಡೆಯುತ್ತಿರುವವರು ಯಾರ್‍ಯಾರೆಂಬುದನ್ನು ಈಗಿನ ಚುನಾವಣೆಯಲ್ಲಿ .. ..

(ಗೊಂದಲ)

ಅಧ್ಯಕ್ಷರು:- ಮಾನ್ಯ ರೇಣುಕಾಚಾರ್ಯರವರೆ ಕುಳಿತುಕೊಳ್ಳಿ, ಮಾನ್ಯ ಬಾಲಕೃಷ್ಣರವರೆ ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಿ. ಸಿದ್ದುಸವದಿಯವರೆ....

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಅವರು ಸದನದಲ್ಲಿ ಅದನ್ನು ಪ್ರೂವ್ ಮಾಡಲಿ, ಇಲ್ಲವೆಂದರೆ ಆ ಪದವನ್ನು ಅವರು ವಾಪಸ್ಸು ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಜನ ಚುನಾವಣೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಇನ್ನೂ ನಿಮಗೆ ಏನು ಹೇಳಬೇಕು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸದಸ್ಯರಿಗೆ ನಾನು ಬೆಳಗಿನಿಂದಲೂ ಹೇಳುತ್ತಿದ್ದೇನೆ. ಯಾರ ಮೇಲಾದರೂ ಅಪಾದನೆ ಮಾಡುವುದಿದ್ದರೆ, ಅಲಿಗೇಷನ್ ಮಾಡುವುದಿದ್ದರೆ ಪ್ರತ್ಯೇಕ ನೋಟಿಸ್ ಕೊಡಿ, ಸುಮ್ಮನೆ ಹಾಗೆ.....

ಶ್ರೀ ಸಿದ್ದು ಸವದಿ :- ವ್ಯಕ್ತಿಗತವಾಗಿ ಮಾಡುತ್ತಿಲ್ಲ. ಯಾವ ರೀತಿಯಲ್ಲೂ ಮಾಡುವ ಹಾಗೆ ಇಲ್ಲ.

ಅಧ್ಯಕ್ಷರು :- ವ್ಯಕ್ತಿಗತವಲ್ಲ. ನಿಮಗೆ ಪದಗಳ ಮೇಲೆ ಹಿಡಿತವಿರಲಿ. ಯಾರ ಮೇಲಾದರೂ ಮಾತನಾಡುವುದಿದ್ದರೆ, ಅಪಾದನೆ ಮಾಡುವುದಿದ್ದರೆ ನೋಟೀಸ್ ಕೊಡಿ. ಮಾನ್ಯ ರೇಣುಕಾಚಾರ್ಯರವರೆ, ಬಾಲಕೃಷ್ಣರವರೆ ಕುಳಿತುಕೊಳ್ಳಿ, ಸಿದ್ದುಸವದಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿದ್ದು ಸವದಿ :- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಿಷ್ಟೆ, ಗಣಿಗಾರಿಕೆಯಲ್ಲಿ ಲೂಟಿ ನಡೆಯುತ್ತದೆ. ರಾಜ್ಯದ ಬೊಕ್ಕಸಕ್ಕೆ ಸಾವಿರಾರು ಕೋಟಿ,

ರೂಪಾಯಿಗಳು ಹಾನಿಯಾಗಿದೆ. ಇದನ್ನು ಒಪ್ಪುವಂಥಾದ್ದು, ನಾನು ಇದನ್ನು ಒಪ್ಪುತ್ತೇನೆ. ಈ ರಾಜ್ಯದ ಜನರು ಅದನ್ನು ಒಪ್ಪುತ್ತಾರೆ. ಇದಕ್ಕೆ ಕಾರಣರು ಯಾರು? ಯಾರು ಕೊಟ್ಟರು?

ಶ್ರೀ ಹೆಚ್.ಡಿ. ರೇವಣ್ಣ :- ನೀವು ಮಾಡಿಲ್ಲವೆಂದರೆ ಸಿ.ಬಿ.ಐ.ಗೆ ರೆಫರ್ ಮಾಡಿ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಮಾತನಾಡಬೇಡಿ. ಈಗ ಮಾನ್ಯ ಸಿದ್ದುಸವದಿಯವರೊಬ್ಬರು ಮಾತನಾಡಬೇಕು. ಅವರಿಗೆ ಮಾತನಾಡುವುದಕ್ಕೆ ಅವಕಾಶವಿದೆ. ಎಲ್ಲರೂ ಪದೇ ಪದೇ ಎದ್ದು ನಿಲ್ಲಬಾರದು. ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಲಾಗಿದೆ. ಅವರಷ್ಟೆ ಮಾತನಾಡಲಿ, ಉಳಿದವರು ಪದೇ ಪದೇ ಎದ್ದು ನಿಲ್ಲಬೇಡಿ.

ಶ್ರೀ ಸಿದ್ದು ಸವದಿ :- ಮಾನ್ಯ ಅಧ್ಯಕ್ಷರೆ, ನಾನು ಕೇಳುವುದೆನೆಂದರೆ ಗಣಿಗಾರಿಕೆಯಲ್ಲಿ ಲೂಟಿ ಆಗಿದೆ. ಈ ರೀತಿ ಲೂಟಿ ಮಾಡುವ ಹಾಗೆ ನೀವು ಏಕೆ ಲೈಸನ್ಸ್ ಕೊಟ್ಟರಿ? ಅದರಲ್ಲಿ ನಿಮ್ಮದು ಏನು ಪಾಲು ಇತ್ತು? ಇಲ್ಲಿ ಅದನ್ನು ಹೇಳಬೇಕಲ್ಲಾ, ಈ ರಾಜ್ಯದ ಸಂಪತ್ತನ್ನು, ಈ ನಾಡನ್ನು ಲೂಟಿ ಮಾಡುವುದಕ್ಕೆ ನೀವು ಅವಕಾಶ ಮಾಡಿ ಕೊಟ್ಟಿದ್ದೀರಿ.

(ಗೊಂದಲ)

ಅಧ್ಯಕ್ಷರು :- ನೀವೇ ಪರಸ್ಪರ ಮಾತನಾಡುವ ಹಾಗೆ ಇಲ್ಲ, ಕೃಷ್ಣಪ್ಪನವರೆ ಕುಳಿತುಕೊಳ್ಳಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ನೀವು ನಮಗೆ ಬೆಳಗಿನಿಂದಲೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ.

ಅಧ್ಯಕ್ಷರು :- ಕುಳಿತುಕೊಳ್ಳಿ, ಅವಕಾಶ ಕೊಡತ್ತೇವೆ. ಎಲ್ಲರಿಗೂ ಅವಕಾಶವನ್ನು ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಸಿದ್ದು ಸವದಿ :- ನಮ್ಮ ಸರ್ಕಾರಕ್ಕೆ ಬದ್ಧತೆ ಇದೆ. ಈಗಾಗಲೇ 2008ರವರಗೆ ಲೋಕಾಯುಕ್ತರಿಂದ ವರದಿಯನ್ನು ನಮ್ಮ ಮಾನ್ಯ

ಮುಖ್ಯಮಂತ್ರಿಯವರು ತರಿಸಿಕೊಟ್ಟರು. ನಮ್ಮ ಸರ್ಕಾರ ಈಗಲೂ ಸಹಿತ ಲೋಕಾಯುಕ್ತರ ವರದಿಯನ್ನು ಪರಿಶೀಲನೆ ಮಾಡುವುದಕ್ಕೆ ಕೊಟ್ಟು ಆಗಿದೆ. ಅದು ಬಂದ ನಂತರ ನಿರ್ದಾಕ್ಷಿಣ್ಯವಾಗಿ ತಪ್ಪಿತಸ್ಥರ ಮೇಲೆ ನಮ್ಮ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅದನ್ನು ನಾವು ಬೆಂಬಲಿಸುತ್ತೇವೆ. ಇನ್ನು ತಾರತಮ್ಯದ ಬಗ್ಗೆ ಮಾತನಾಡುತ್ತಾರೆ, ಚುನಾವಣೆ ಸಂದರ್ಭ ಬಂದಾಗ ಬಿ.ಜೆ.ಪಿ. ಸರ್ಕಾರ ತಾರತಮ್ಯ ಮಾಡುತ್ತಿದೆಯೆಂಬ ಸುಳ್ಳು ಆರೋಪವನ್ನು ಮಾಡುತ್ತಿದ್ದಾರೆ. ತಮ್ಮ ಕನ್ನಡಿಯನ್ನು ನೋಡಿಕೊಳ್ಳಬೇಕಲ್ಲಾ. ನೀವು ಬಳ್ಳಾರಿ ಜಿಲ್ಲೆಗೆ ಯೋಜನೆಯ ಅಡಿಯಲ್ಲಿ ವಿಶೇಷ ಪ್ಯಾಕೇಜ್ 1994 ರಿಂದ ಇಲ್ಲಿಯವರೆಗೆ 3,797ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಬಳ್ಳಾರಿ ಜಿಲ್ಲೆಗೆ ಮಾತ್ರ ಏಕೆ ಕೊಟ್ಟಿರಿ? ಉಳಿದ ಜಿಲ್ಲೆಗಳು ಡಾ:ನಂಜುಂಡಪ್ಪನವರ ವರದಿಯಲ್ಲಿ ಬರುವಂತಹ ಹಿಂದುಳಿದ ಜಿಲ್ಲೆಗಳಿಗೆ ಇಲ್ಲ. ಇಲ್ಲಿ ತಾರತಮ್ಯ ಮಾಡಿದ್ದೀರಿ. ಚುನಾವಣೆ ನಿಮಿತ್ತವಾಗಿ ಬಳ್ಳಾರಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಅನ್ನು ಕೊಡುವುದರ ಮುಖಾಂತರ ಈ ರಾಜ್ಯದ ಜನತೆಗೆ ತಾರತಮ್ಯ ಮಾಡಿರುವಂಥಾದ್ದು ಹಿಂದಿನ ಸರ್ಕಾರವೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಸದಸ್ಯರನ್ನು ಒಂದು ನಿಮಿಷ ಯೀಲ್ಡ್ ಅಗಲು ಹೇಳಿ. ಅವರು 3,000 ಕೋಟಿ ರೂಪಾಯಿಗಳನ್ನು ಬಳ್ಳಾರಿ ಜಿಲ್ಲೆಗೆ ಕೊಟ್ಟರೆಂದು ಹೇಳಿದರು. ಬಳ್ಳಾರಿ ಜಿಲ್ಲೆಗೆ 3,000 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ಇವತ್ತು ಮಾನ್ಯ ಎಲ್.ಕೆ. ಅಡ್ವಾನಿಯವರು (ಗೊಂದಲ) ಬಂದರು. ಇಲ್ಲವೆಂದರೆ ಎಲ್.ಕೆ.ಅಡ್ವಾಣಿಯವರು ಬರುವ ಹಾಗೆ ಇರಲಿಲ್ಲ. ಇವತ್ತು 500 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವಂಥಾದ್ದು ಈ ಮೂರು ಸಾವಿರ ಕೋಟಿ ರೂಪಾಯಿಗಳಲ್ಲಿ ಎಂಬುದನ್ನು ದಯಮಾಡಿ ಅವರಿಗೆ ಅರ್ಥ ಮಾಡಿಕೊಳ್ಳುವುದಕ್ಕೆ ಹೇಳಿ. ಆ ರೀತಿ ಮಾಡಿಲ್ಲವೆಂದರೆ ಇನ್ನೂ ಆ ರಾಜ್ಯ ಕತ್ತಲೆಯಲ್ಲಿರುತ್ತಿತ್ತು.

ಅಧ್ಯಕ್ಷರು :- ಮಾನ್ಯ ಸಿದ್ದು ಸವದಿಯವರೆ ತಾವು ಭಾಷಣವನ್ನು continue ಮಾಡುತ್ತಿರಾ. ...

ಶ್ರೀ ಸಿದ್ದುಸವದಿ :- ಮಾಡುತ್ತೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಒಬ್ಬ ಸದಸ್ಯರಿಗೆ ಒಂದೂವರೆ ಗಂಟೆ ಟೈಮ್ ಕೊಟ್ಟಿದ್ದೀರಿ. ತಾವು ಟೈಮ್ ಫಿಕ್ಸ್ ಮಾಡಿ, ಯಾರಿಗೆ ಎಷ್ಟು ಸಮಯವೆಂದು ನಿಗದಿ ಮಾಡಿ. ಇಲ್ಲಿ ಖಟೈಮ್ ಪಾಸ್‌ಖ ಮಾಡುವುದಕ್ಕೆ ಅಧಿವೇಶನವನ್ನು ಮಾಡುತ್ತಿದ್ದೀರಾ......

ಅಧ್ಯಕ್ಷರು :- ನೀವು ಮಾತನಾಡಿ. ನಿಮಗೂ ಅವಕಾಶವನ್ನು ಕೊಡುತ್ತೇನೆ, ಮಾನ್ಯ ಪಾಟೀಲ್‌ರೇ ಈ ರೀತಿ "ಟೈಮ್ ಪಾಸ್" ಎನ್ನುವಂಥ ಪದ ಪ್ರಯೋಗ ಮಾಡುವಂಥಾದ್ದು ಸರಿಯಲ್ಲ. ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಅವರು ಆಡಳಿತ ಪಕ್ಷದವರು ಟೈಮ್ ನಿಗದಿ ಮಾಡಿದ್ದೇವೆ. ನಿಮಗೂ ಟೈಮ್ ನಿಗದಿ ಮಾಡುತ್ತೇವೆ. ಆ ಟೈಮ್ ಅನ್ನು ಎಲ್ಲರೂ ಸರಿಯಾಗಿ ಉಪಯೋಗ ಮಾಡಿ. ಇಲ್ಲಿ ಟೈಮ್ ಪಾಸ್ ಎಂದು ಹೇಳುವಂಥಾದ್ದು, ಸರಿಯಲ್ಲ. ಸರಿಯಾಗಿ ತಾವು ಮಾತನಾಡುವುದನ್ನು ಕಲಿಯಿರಿ.

ಶ್ರೀ ಸಿದ್ದು ಸವದಿ :- ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರಕ್ಕೆ ಈ ರಾಜ್ಯದ ಜನ 110 ಸೀಟುಗಳನ್ನು ಆರಿಸಿ ಕಳುಹಿಸಿದಾಗ, 6 ಜನ ಪಕ್ಷೇತರರೊಂದಿಗೆ ನಮ್ಮ ಸರ್ಕಾರವನ್ನು ರಚನೆ ಮಾಡಿದೆವು. ಇದೆಲ್ಲಾ ಈ ರಾಜ್ಯದ ಜನತೆಗೆ ಗೊತ್ತಿದೆ. ಈ ಸರ್ಕಾರವನ್ನು ಏನಾದರೂ ಮಾಡಿ ಅತಂತ್ರ ಮಾಡಬೇಕೆಂಬ ಉದ್ದೇಶದಿಂದ ಈ ರಾಜ್ಯದಲ್ಲಿ ಚರ್ಚ್‌ಗಳ ಮೂಲಕ ದಂಗೆ ಎಬ್ಬಿಸುವಂಥ ಕಾರ್ಯಕ್ರಮವನ್ನು ಮಾಡಿರುವ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ರಾಜ್ಯದಲ್ಲಿ ಸೆಪ್ಟೆಂಬರ್ 2008ರಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ಪ್ರಕರಣಗಳು ನಡೆದವು. ಆ ಎಲ್ಲವನ್ನು ಪ್ರಾಮಾಣಿಕವಾಗಿ, ನಿಷ್ಠುರವಾಗಿ ಆ ಸತ್ಯ ಹೊರಗಡೆ ಬರಬೇಕೆಂಬ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಂಡಿರುವ ಸಂಗತಿಯನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ ಚರ್ಚ್‌ಗಳ ಘಟನೆಗಳ ಸತ್ಯತೆಯನ್ನು ತಿಳಿಯುವುದಕ್ಕೆ, ಖಚಿತ ಕಾರಣಗಳು ಏನು, ಇದಕ್ಕೆ ಕಾರಣರು ಯಾರು ಎಂಬುದನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸುವ ಕೆಲಸಕ್ಕೆ ನಿವೃತ್ತ ನ್ಯಾಯಮೂರ್ತಿ ಶ್ರೀ ಸೋಮಶೇಖರ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ಸರ್ಕಾರ ರಚನೆ ಮಾಡುವುದರ ಮುಖಾಂತರ ಅವರ ರಕ್ಷಣೆ ಮತ್ತು ಬದ್ಧತೆಯನ್ನು ಈ ರಾಜ್ಯಕ್ಕೆ ತೋರಿಸಿಕೊಟ್ಟಿರುವ ಸಂಗತಿಯಾಗಿದೆ.

ಭಾರತೀಯ ಜನತಾ ಪಕ್ಷದ ಸರ್ಕಾರ ಬಂದ ಆರೇಳು ತಿಂಗಳುಗಳಲ್ಲಿ ಎಷ್ಟೊಂದು ಯುದ್ಧಗತಿಯಲ್ಲಿ ಈ ರಾಜ್ಯದ ಅಭಿವೃದ್ಧಿ ನಡೆಯಿತು, ಅದು ರಸ್ತೆ ಇರಬಹುದು, ಕುಡಿಯುವ ನೀರು ಇರಬಹುದು, ನೀರಾವರಿ ಯೋಜನೆ ಇರಬಹುದು, "ಆಶ್ರಯ" ಮನೆಗಳು ಇರಬಹುದು, ವಿದ್ಯುತ್ತಿನ ಸಮಸ್ಯೆ ಇರಬಹುದು. ಈ ರೀತಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಇದರ ಜೊತೆಗೆ ಗೊಬ್ಬರದ ಸಮಸ್ಯೆಯನ್ನು create ಮಾಡಿದರು. ಗೊಬ್ಬರದ ವಿಷಯದಲ್ಲೂ ಸಹ ರಾಜ್ಯ ಸರ್ಕಾರದ ಮೇಲೆ ಕೆಲವು ಮಂದಿ ಆಪಾದನೆ ಮಾಡಿದರು. ಗೊಬ್ಬರದ ವಿತರಣೆಯ ಜವಾಬ್ದಾರಿ ಯಾರದ್ದು? ಗೊಬ್ಬರದ ಕೊರತೆ ಯಾವ ಸಂದರ್ಭದಲ್ಲಿ ಆಯಿತು? ರಾಜ್ಯಪಾಲರ ಆಡಳಿತದಲ್ಲಿ ಕೊರತೆ ಆಯಿತು. ಅದಕ್ಕೆ ರಾಜ್ಯಪಾಲರ indent ಹಾಕಬೇಕಾಗಿತ್ತು, ತರಿಸಿಕೊಳ್ಳಬೇಕಾಗಿತ್ತು. ನಮ್ಮ ಸರ್ಕಾರ ಬಂದ ಒಂದು ವಾರದಲ್ಲೇ ಗೊಬ್ಬರದ ಸಮಸ್ಯೆಯನ್ನು ಸೃಷ್ಟಿ ಮಾಡಿದರು. ಒಂದು ವಾರದಲ್ಲಿ ಎಲ್ಲವನ್ನೂ ಮಾಡಲು ನಮಗೆ ಆಗುವುದಿಲ್ಲ. ಎಲ್ಲಾ ರೀತಿಯಲ್ಲೂ ಸಹ ಈ ಸರ್ಕಾರವನ್ನು ಅಸ್ಥಿರ ಮಾಡಲು ವಿರೋಧ ಪಕ್ಷದವರು ಪ್ರಯತ್ನ ಪಟ್ಟಾಗ ಜನ ಮಾತ್ರ ನಮ್ಮ ಬಿ.ಜೆ.ಪಿ. ಸರ್ಕಾರವನ್ನು ಕೈ ಬಿಟ್ಟಿಲ್ಲ ಎನ್ನುವಂಥ ಒಂದು ಉದಾಹರಣೆಯನ್ನು ಮೊನ್ನೆ ತೋರಿಸಿ ಕೊಟ್ಟಿದ್ದಾರೆ. ನೀವು ಏನೇ ಮಾಡಿ, ಜನರು ಈಗ ಬಿ.ಜೆ.ಪಿ.ಯ ನಾಡಿ ಮಿಡಿತವನ್ನು ಅರ್ಥಮಾಡಿಕೊಂಡಿದ್ದಾರೆ. ಕಳೆದ 50 ವರ್ಷಗಳಲ್ಲಿ ಆಗಲಾರದಂಥ ಕೆಲಸವನ್ನು ಯಡಿಯೂರಪ್ಪನವರು ಮಾಡಿದ್ದಾರೆ, ಯಡಿಯೂರಪ್ಪನವರು ರಾಜ್ಯದ ಪರವಾಗಿದ್ದಾರೆ, ಅದಕ್ಕಾಗಿ ಯಡಿಯೂರಪ್ಪನವರಿಗೆ ಒಂದು 10-15-20 ವರ್ಷ ಅಧಿಕಾರ ಕೊಡೋಣ ಎಂದು ಆಶೀರ್ವಾದ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಸದಸ್ಯರು ಪರಸ್ಪರ ಮಾತನಾಡಬಾರದು, ಚರ್ಚೆ ಮಾಡಬಾರದು. ಅವರು ಮಾತನಾಡಲಿ. ಸಿದ್ದು ಸವದಿಯವರೇ ತಾವು ಮುಗಿಸಿ ತಾವು conclude ಮಾಡಿ.

ಶ್ರೀ ಸಿದ್ದು ಸವದಿ :- ಯಡಿಯೂರಪ್ಪನವರಿಗೆ ಈ ರಾಜ್ಯದ ಜನ, ನೀವು ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ಆಶೀರ್ವಾದ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ, ಇನ್ನು 15-20 ವರ್ಷ ನೀವು ಏನು ಮಾಡಿದರೂ ಅಧಿಕಾರಕ್ಕೆ ಬರಲು ಆಗುವುದಿಲ್ಲ, ಜನರು

ನಿಮಗೆ ಆಶೀರ್ವಾದ ಮಾಡುವುದಿಲ್ಲ. ಏಕೆಂದರೆ ನಿಮ್ಮ ಕರ್ಮಕಾಂಡದ ಆಡಳಿತವನ್ನು ಜನ ನೋಡಿ, ನೋಡಿ ಬೇಸತ್ತು ಬಿ.ಜೆ.ಪಿ.ಗೆ ಓಟು ಹಾಕಿದ್ದಾರೆ, ಬಿ.ಜೆ.ಪಿ.ಗೆ ಆಶೀರ್ವಾದ ಮಾಡಿದ್ದಾರೆ. ಅದಕ್ಕಾಗಿ ಇನ್ನು ಏನಿದ್ದರೂ ನೀವು 20 ವರ್ಷ ವಿರೋಧ ಪಕ್ಷದಲ್ಲೇ ಕುಳಿತುಕೊಳ್ಳಬೇಕು. ಅಥವಾ ಅಧಿಕಾರ ಬೇಕಾದರೆ ನಮ್ಮ ಕಡೆಗೆ ಬನ್ನಿ, ನಾವು ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ. ಅದಕ್ಕೂ ಸಹ ನಾವು ತಯಾರಿದ್ದೇವೆ. ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನೀವು ಒಳ್ಳೆಯ ಕೆಲಸಕ್ಕೆ, ಅಭಿವೃದ್ಧಿ ಕೆಲಸಕ್ಕೆ ವಿರೋಧ ಮಾಡಬೇಡಿ, ಬೆಂಬಲ ಮಾಡಿ. ನಾನು ಇಲ್ಲಿ ಒಂದು ಅಂಕಿಸಂಖ್ಯೆಯನ್ನು ಹೇಳುತ್ತೇನೆ. ಈಗಾಗಲೇ ಹೇಳಿದರು, ಈ ಆರ್ಥಿಕ ಹಿನ್ನಡೆಯ ಸಂದರ್ಭದಲ್ಲೂ ಸಹ ನಮ್ಮ ಸರ್ಕಾರ ಮಾಡಿರುವ ಸಾಧನೆಯನ್ನು ನೋಡಿ. ನಮ್ಮ ಯಡಿಯೂರಪ್ಪನವರು ಮಾಡಿರತಕ್ಕಂಥ ಸಾಧನೆಯನ್ನು ನೋಡಿ. ವಾಣಿಜ್ಯ ತೆರಿಗೆಯಲ್ಲಿ 14% ಹೆಚ್ಚಿಗೆ ತೆರಿಗೆ ವಸೂಲು ಮಾಡಿದ್ದಾರೆ. ಅಬಕಾರಿಯಲ್ಲಿ 14.9% ಹೆಚ್ಚಿಗೆ ತೆರಿಗೆ ವಸೂಲು ಮಾಡಿದ್ದಾರೆ. ವಾಹನ ತೆರಿಗೆಯಲ್ಲಿ 9.2% ಹೆಚ್ಚಿಗೆ ವಸೂಲು ಮಾಡಿದ್ದಾರೆ. ಒಟ್ಟು 14.3% ಹೆಚ್ಚುವರಿಯಾಗಿ ತೆರಿಗೆ ಸಂಗ್ರಹವಾಗಿದೆ. ಈ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವುದರ ಮುಖಾಂತರ ನಾವು ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನ ತರಿಸಿಕೊಳ್ಳುವಲ್ಲೂ ಸಹ ನಾವು ಸಫಲರಾಗಿದ್ದೇವೆ. ಉದಾಹರಣೆಗೆ ಹೇಳುವುದಾದರೆ, PMGSY ಅಂದರೆ ಪ್ರೈಮ್ ಮಿನಿಸ್ಟರ್ ಗ್ರಾಮ ಸಡಕ್ ಯೋಜನೆಯಲ್ಲಿ ಹಿಂದೆ ಯಾವಾಗಲೂ ಅಷ್ಟು ಪ್ರಗತಿಯಾಗಿರಲಿಲ್ಲ. ಇಲ್ಲಿ ಅವರದೇ ಸರ್ಕಾರ ಇದ್ದರೂ ಸಹ, ಕೇಂದ್ರ ಸರ್ಕಾರ ಅವರದೇ ಇದ್ದರೂ ಸಹ ಇಷ್ಟೊಂದು ಪ್ರಗತಿದಾಯಕವಾಗಿ ಕೆಲಸ ಮಾಡಿರಲಿಲ್ಲ. ನಾವು ಹೆಚ್ಚಿನ ಮುತುವರ್ಜಿ ವಹಿಸಿ ಹೆಚ್ಚು ಖರ್ಚು ಮಾಡಿದ್ದರಿಂದ, ಕೇಂದ್ರ ಸರ್ಕಾರ ಹೆಚ್ಚು ಹಣವನ್ನು ಮಂಜೂರು ಮಾಡಿದೆ. ಕೇಂದ್ರ ಸರ್ಕಾರ 2006ರಲ್ಲಿ 1,269 ಕೋಟಿ ರೂಪಾಯಿಗಳನ್ನು 2007ರಲ್ಲಿ 1,394 ಕೋಟಿ ರೂಪಾಯಿಗಳನ್ನು, 2008ರಲ್ಲಿ 1,922 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಇದು ಕೇಂದ್ರ ಸರ್ಕಾರದಿಂದ ನಮಗೆ ಅನುದಾನ ಬಂದಿರತಕ್ಕಂಥ ಸಂಗತಿ. ಈ ವರ್ಷ PMGSY ಅಡಿಯಲ್ಲಿ ನಾವು ಈಗಾಗಲೇ 205 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, ನಮ್ಮ ಸಾಧನೆಯನ್ನು ಮೆ: ಕೇಂದ್ರ ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾವನೆಯನ ಮಂಜೂರು ಮಾಡಲು ಒಪ್ಪಿರುತ್ತದೆ. ಇದು ಸಾಧನೆಯಲ್ಲವೇ?

ಶ್ರೀ ಬಿ. ರಮಾನಾಥ ರೈ :- ಕೇಂದ್ರ ಸರ್ಕಾರ ನಿಮ್ಮದಿತ್ತಲ್ಲ, ಆಗ ಎಷ್ಟು ಕೊಟ್ಟಿದ್ದಾರೆ, ಆಗ ಎಷ್ಟು ಬಂತು ಎನ್ನುವ ಅಂಕಿಅಂಶಗಳನ್ನೂ ಕೊಡಿ.

ಅಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ.

ಶ್ರೀ ಬಿ. ರಮಾನಾಥ ರೈ :- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ನೀವು ಇದ್ದಾಗ ಎಷ್ಟು ಕೊಟ್ಟಿರಿ?

ಶ್ರೀ ಸಿದ್ದು ಸವದಿ :- ಹಣ ಖರ್ಚಾಗಿಲ್ಲ, ಅಭಿವೃದ್ಧಿ ಕೆಲಸವಾಗಿಲ್ಲ ಎನ್ನುವ ಆಪಾದನೆಯನ್ನು ವಿರೋಧ ಪಕ್ಷದವರು ಮಾಡಿರುವುದನ್ನು ನಾನು ಕೇಳಿದ್ದೇನೆ. ಇಲ್ಲಿರುವ ಅಂಕಿ ಸಂಖ್ಯೆಯನ್ನು ನೋಡಿ ತಿಳಿದುಕೊಳ್ಳಬೇಕು. ಯೋಜನಾ ವೆಚ್ಚ - ರಾಜ್ಯದ ಹುಜೂರ್ ಖಜಾನೆಯಿಂದ ಪಡೆದ ಮಾಹಿತಿಯಂತೆ ಕಳೆದ ಆರು ವರ್ಷಗಳ ಯೋಜನಾ ವೆಚ್ಚ ಈ ಕೆಳಗಿನಂತಿರುತ್ತದೆ.

ಡಿಸೆಂಬರ್ 2003ಕ್ಕೆ 4,015 ಕೋಟಿ ರೂಪಾಯಿ ಖರ್ಚಾಗಿದೆ.

ಡಿಸೆಂಬರ್ 2004ಕ್ಕೆ 5,043 ಕೋಟಿ ರೂಪಾಯಿ ಖರ್ಚಾಗಿದೆ.

ಡಿಸೆಂಬರ್ 2005ಕ್ಕೆ 6,194 ಕೋಟಿ ರೂಪಾಯಿ ಖರ್ಚಾಗಿದೆ.

ಡಿಸೆಂಬರ್ 2006ಕ್ಕೆ 7,844 ಕೋಟಿ ರೂಪಾಯಿ ಖರ್ಚಾಗಿದೆ.

ಡಿಸೆಂಬರ್ 2007ಕ್ಕೆ 7,721 ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಡಿಸೆಂಬರ್ 2008ಕ್ಕೆ ಅಂದರೆ ನಮ್ಮ ಸರ್ಕಾರವಿದ್ದಾಗ ಆದ ಖರ್ಚು 9,488 ಕೋಟಿ ರೂಪಾಯಿಗಳು. ಕಳೆದ ವರ್ಷಕ್ಕೆ ಹೋಲಿಸಿದರೆ 1,763 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನಾವು ಯೋಜನೆಯ ಸಲುವಾಗಿ ಡಿಸೆಂಬರ್ 2008ಕ್ಕೆ ಖರ್ಚು ಮಾಡಿರತಕ್ಕಂಥ ಸಂಗತಿಯಾಗಿದೆ. ಸರ್ಕಾರ ಈ ರೀತಿ ಸಾಧನೆ ಮಾಡಿದ್ದು, ಇದು ಸಾಧನೆ ಅಲ್ಲವೇನು? ಅಭಿವೃದ್ಧಿ ಮತ್ತು ಪ್ರಗತಿಯ ವೇಗ ತೀವ್ರಗೊಂಡಿರುವುದಕ್ಕೆ ಈ ಅಂಕಿಸಂಖ್ಯೆಗಳು ಆಧಾರವಲ್ಲವೇನು? ಏನೂ ಸಾಧನೆ ಆಗಿಲ್ಲ, zero, zero ಎಂದರೆ, ನೀವು zero ಆಗಿದ್ದೀರಿ, ಮೊನ್ನೆ ನಡೆದ ಉಪ ಚುನಾವಣೆಯಲ್ಲಿ ನೀವು zero ತೆಗೆದುಕೊಂಡಿದ್ದೀರಿ. ಉಪ ಚುನಾವಣೆಯಲ್ಲಿ ದೊಡ್ಡ ಸೊನ್ನೆ ಕೊಟ್ಟಿದ್ದಾರೆ ನಿಮಗೆ. ಅದನ್ನು ತಿಳಿದುಕೊಂಡು ನೀವು, ಮುಂದೆ ಬರುವಂಥ ದಿವಸಗಳಲ್ಲಿ ಪ್ರಗತಿಪರವಾಗಿರತಕ್ಕಂಥ, ಈ ರಾಜ್ಯ ಅಭಿವೃದ್ಧಿಯ ಪರವಾಗಿರತಕ್ಕಂಥ, ರಾಜ್ಯದ ಬಡವರ ಪರವಾಗಿರತಕ್ಕಂಥ, ನೇಕಾರರ

ಪರವಾಗಿರತಕ್ಕಂಥ, ದಲಿತ ಜನಾಂಗದ ಪರವಾಗಿರತಕ್ಕಂಥ ನಮ್ಮ ಸನ್ಮಾನ್ಯ ಯಡಿಯೂರಪ್ಪನವರಿಗೆ, ಬಿ.ಜೆ.ಪಿ. ಸರ್ಕಾರಕ್ಕೆ ವಿರೋಧ ಪಕ್ಷದವರೂ ಸಹ ಸಹಕಾರ ಕೊಟ್ಟು, ಈ ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇಲ್ಲಿಯವರೆಗೆ ಮಾತನಾಡಲು ಅವಕಾಶ ಕೊಟ್ಟಿರುವಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ವಿರೋಧ ಪಕ್ಷದ ಉಪನಾಯಕರು) :- ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಭಾಷಣ ವಿಧಾನಸಭೆಯ ಮುಂದೆ ಮಂಡನೆಯಾಗಿದೆ. ಆ ಭಾಷಣವನ್ನು ಆಡಳಿತ ಪಕ್ಷದ ನನ್ನ ಆತ್ಮೀಯ ಸ್ನೇಹಿತರುಗಳು ಬಹಳ ಸಂತೋಷದಿಂದ ಮೇಜು ಕುಟ್ಟಿ ಸ್ವಾಗತ ಮಾಡಿದ್ದಾರೆ. ಅದನ್ನು ಕೇಳಿ, ಕೇಳಿ ನನಗೆ ಸಾಕಾಗಿದೆ. ಬೆಳಗಾವಿಯಲ್ಲಿ ಅಧಿವೇಶನವನ್ನು ಮಾಡತಕ್ಕಂಥ ಸರ್ಕಾರದ ತೀರ್ಮಾನ, ಸಾರ್ವತ್ರಿಕವಾಗಿ ಒಂದು ಒಳ್ಳೆಯ ತೀರ್ಮಾನ ಎನ್ನತಕ್ಕಂಥ ಮೆಚ್ಚುಗೆ ಮಾಧ್ಯಮಗಳಲ್ಲಿ ಬಂತು. ಅದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ ರಾಜ್ಯಪಾಲರ ಭಾಷಣವನ್ನು ಓದಿದಾಗ ಜನಗಳಿಗೆ ಎಲ್ಲೋ ಒಂದು ಕಡೆ ನಿರಾಸೆಯಾಯಿತು ಎನ್ನುವ ಭಾವನೆ ನನಗಿದೆ. ಕಾರಣ, ತಾವು ಈಗ ಪ್ರಥಮ ವರ್ಷದಲ್ಲಿ ಮೊದಲನೇ ಭಾಷಣವನ್ನು ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಎಲ್ಲೋ ಒಂದು ಕಡೆಯಲ್ಲಿ ಜನ ನಿರೀಕ್ಷೆ ಮಾಡಿದ್ದರು. ಏಕೆಂದರೆ, ಈ ಭಾಗದ ಜನ ನಿಮಗೆ ಹೆಚ್ಚು ಬೆಂಬಲವನ್ನು ಕೊಟ್ಟಿದ್ದರು. ಹಾಗೆ ಕೊಟ್ಟ ಹಿನ್ನಲೆಯಲ್ಲಿ ಬಹಳ ಆಸೆಯನ್ನು ಇಟ್ಟು, ನಿರೀಕ್ಷೆಯನ್ನು ಇಟ್ಟು, ರಾಜ್ಯಪಾಲರ ಭಾಷಣದ ಮೇಲೆ ಬಹಳ ನಿರೀಕ್ಷೆಯನ್ನು ಇಟ್ಟಿದ್ದರು. ತಾವು ಯೋಚನೆ ಮಾಡಬೇಕು. ರಾಜ್ಯಪಾಲರ ಭಾಷಣ ಎಂದರೆ ಅದು ರಾಜ್ಯಪಾಲರು ಮಾಡತಕ್ಕಂಥ ಭಾಷಣವಲ್ಲ. ಸರ್ಕಾರವನ್ನು ಆಳತಕ್ಕಂಥ ತಾವು ತಯಾರು ಮಾಡಿಸಿದಂಥ ಭಾಷಣವನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸುತ್ತೀರಿ. ಪ್ರಥಮ ದಿನ ಬೆಳಗಾವಿಯಲ್ಲಿ ರಾಜ್ಯಪಾಲರ ಬಾಯಿಯಿಂದ ಹೇಳಿಸುವಂಥ ಈ ಭಾಷಣದಲ್ಲಿ ಸರ್ಕಾರ ವರ್ಷಪೂರ್ತಿ ತನ್ನ ನೀತಿಯೇನು ಎನ್ನತಕ್ಕಂಥಾದ್ದನ್ನು ಪ್ರತಿಪಾದನೆ ಮಾಡುವಂಥ ಒಂದು ದಾಖಲೆಯಾಗಬೇಕೇ ವಿನ: ಅದು ಕೇವಲ ಹಿಂದಿನ ಬಜೆಟ್‌ನ ಸಾಧನೆಯನ್ನು ಹೇಳತಕ್ಕಂಥಾದ್ದು ಎಷ್ಟರಮಟ್ಟಿಗೆ ಸಾಧು ಎಂದು ಕೇಳುತ್ತೇನೆ. ಅದನ್ನು ಮಾಡತಕ್ಕಂಥ ಪರಮೋಚ್ಛ ತೀರ್ಮಾನ ನಿಮ್ಮದು. ಅದನ್ನು ನಾವ್ಯಾರೂ ತೀರ್ಮಾನ ಮಾಡಲು ಆಗುವುದಿಲ್ಲ. ಆದರೆ ಬೆಳಗಾವಿಯಲ್ಲಿ ನೀವು ಅಧಿವೇಶನ ಮಾಡುವಂಥ ಸಂದರ್ಭದಲ್ಲಿ

ಜನ ಬಹಳಷ್ಟು ನಿರೀಕ್ಷೆ ಮಾಡಿದ್ದರು. ನಮ್ಮ ಭಾಗಕ್ಕೆ ಏನಾದರೂ ವಿಶೇಷವಾದಂಥ ಕಾರ್ಯಕ್ರಮವನ್ನು ಭಾಷಣದಲ್ಲಿ ಹೇಳುತ್ತಾರೆಯೇ ಎನ್ನುವ ಆಸೆ ಜನರಿಗೆ ಇತ್ತು. ಆದರೆ ಅದು ನಿರಾಸೆ ಆಯಿತು ಎಂದು ನಾನು ಭಾವನೆ ಮಾಡುತ್ತೇನೆ. ಒಂದು ಬಹಳ ಸಂತೋಷ, ಮೊನ್ನೆ ನಡೆದಂಥ ಉಪ ಚುನಾವಣೆಯಲ್ಲಿ ಜನ ಬಹಳ ಮನ್ನಣೆಯನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದೀರಿ. ನಾನು ಜನರ ತೀರ್ಪನ್ನು ಒಪ್ಪುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪಿಗೆ ತಲೆಬಾಗಬೇಕು. ಆದರೆ ಜನ ಇವತ್ತು ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಆಡಳಿತ ಮಾಡಬೇಕು ಎನ್ನುವುದಕ್ಕೆ ಬಹುಮತವನ್ನು ಕೊಟ್ಟಿದ್ದರು, ಅದಕ್ಕೆ ಸ್ವಲ್ಪ ಕೊರತೆ ಇತ್ತು.

ಕೊರತೆಗಾಗಿ ಅನಗತ್ಯವಾಗಿರತಕ್ಕಂಥ ಆತಂಕ ಪಡಬೇಕಾದ ಅಗತ್ಯವಿರಲಿಲ್ಲ. ಇವತ್ತು ಐದಾರು ಜನ ಸ್ವತಂತ್ರವಾಗಿ ಗೆದ್ದಂಥವರು ನಿಮ್ಮ ಜೊತೆ ಕೈಗೂಡಿಸಿದರು, ಅವರು ಕೂಡ ಸಚಿವರಾದರು. 116 ಜನ ಇದ್ದಂಥ ಸಂದರ್ಭದಲ್ಲಿ ಕೂಡ ಮತ್ತೆ ಈ ರೀತಿಯಾಗಿ operation ಮಾಡುವ ಅಗತ್ಯವಿತ್ತೇ? ಎಂಬ ಅನುಮಾನ ಬಹಳಷ್ಟು ಜನರಲ್ಲಿತ್ತು. ಅದೇನೇ ಇರಲಿ, ಉಪ ಚುನಾವಣೆಯಲ್ಲೂ ಕೂಡ ನಿಮಗೆ ಬಹುಮತ ಸಿಕ್ಕಿದೆ. ಜನರ ಮನ್ನಣೆ ಸಿಕ್ಕಿದೆ ಆದರೆ, ತಾವೇ ಹೇಳಿರತಕ್ಕಂತ ರೀತಿಯಲ್ಲಿ ಸ್ಥಿರತೆ. ಸ್ಥಿರತೆ ಎನ್ನುವುದು ಬಹಳ ಪ್ರಮುಖವಾದ ವಿಚಾರ. ಸ್ಥಿರತೆ ಬಗ್ಗೆ ಜನ ಇವತ್ತು ನಿಮಗೆ ಮನ್ನಣೆ ಕೊಟ್ಟಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ತಾವು ಚುನಾವಣೆ ಪೂರ್ವದಲ್ಲಿ ಪ್ರಣಾಳಿಕೆ ಮುಖೇನ ಹೇಳಿದಂತ ಮಾತುಗಳು, ಆ ಮಾತುಗಳನ್ನು ಜನ ನಂಬಿದರು. ಮಾತುಗಳನ್ನು ನಂಬಿದರು ಎನ್ನುವುದಕ್ಕಿಂತ ಹೆಚ್ಚಾಗಿ ಯಾವ ರೀತಿಯಲ್ಲಿ ಯಡಿಯೂರಪ್ಪನವರು ಬಿಜೆಪಿಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಸ್ವರ್ಗವನ್ನೇ ಸೃಷ್ಟಿ ಮಾಡುತ್ತೇವೆ ಎನ್ನುವ ಭಾವನೆಯನ್ನು ಚುನಾವಣಾ ಪೂರ್ವದಲ್ಲಿ ಹೇಳುವ ಕೆಲಸ ಮಾಡಿದಿರಿ. ಎಲ್ಲಾ ರಾಜಕೀಯ ಪಕ್ಷದವರೂ ಕೂಡ ಹೇಳಿದ್ದಾರೆ. ಎಲ್ಲಾ ರಾಜಕೀಯ ಪಕ್ಷದವರೂ ಕೂಡ ತಮ್ಮದೇ ದಾರಿಯಲ್ಲಿ ನಡೆದು ಬಂದು ಪ್ರಣಾಳಿಕೆಯನ್ನು ಕೊಟ್ಟಿದ್ದೆವು. ಆದರೆ, ನಿಮ್ಮ ಪ್ರಣಾಳಿಕೆಯಲ್ಲಿ ಮೆಚ್ಚಿಗೆಯಾಗಿದ್ದಂಥ ಅನೇಕ ವಿಚಾರಗಳನ್ನು ವೈಭವೀಕರಿಸುವಂಥ ರೀತಿಯಲ್ಲಿ ಬಂದಿದ್ದು ಎಲ್ಲೋ ಒಂದು ಕಡೆ ಜನರಿಗೆ ವಿಶ್ವಾಸ ಬಂತು. ಇವತ್ತು ಬಿಜೆಪಿಗೆ ಮತವನ್ನು ಕೊಡುವ ಮುಖೇನ ನಮ್ಮ ಆಸೆಗಳು ಪೂರೈಸಬಹುದೇ, ನಮ್ಮ ಕಷ್ಟಗಳನ್ನು ಬಗೆಹರಿಸಬಹುದೇ ಎನ್ನುವ ವಿಶ್ವಾಸ ಜನಗಳಿಗೆ ಬಂದಿತ್ತು. ಆದರೆ, ತಾವು ಹಿಂದೆ ಮಾಡಿದಂಥ ಬಜೆಟ್‌ನಲ್ಲಿ ಆ

ಸಾಧನೆಯನ್ನು ಒಂದೊಂದನ್ನೂ ಕೂಡ ಇವತ್ತು ಮೇಜು ತಟ್ಟಿ ಹೇಳಿದಿರಲ್ಲಾ, ಮೇಜು ತಟ್ಟುವಂಥ ಕೆಲಸ ಆಗಿದೆಯೇ? ಏನೋ ಒಂದು ಪ್ರಾಥಮಿಕವಾಗಿರುವಂಥದ್ದು, ಒಬ್ಬ ಮುಖ್ಯಮಂತ್ರಿಯಾಗಿರುವವರು, ಯಾವುದರ ಕಡೆಗೆ ಗಮನಹರಿಸಬೇಕು, ಇವತ್ತು ನಮ್ಮ ಮುಂದಿರುವ ಸಮಸ್ಯೆ ಏನೆಂದರೆ, ಗ್ರಾಮಾಂತರ ಪ್ರದೇಶದಲ್ಲಿ ಜನ ಅತ್ಯಂತ ಸಂಕಷ್ಟದಲ್ಲಿದ್ದಾರೆ. ತಾವು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ಅರೆಬರೆಯಾದ ಮಳೆಯಾಯಿತು, ಬೆಳೆ ಬರಲಿಲ್ಲ, ಅದರ ಜೊತೆಗೆ ಆರ್ಥಿಕ ಕುಸಿತ ಕೂಡ ಆಯಿತು. ಪ್ರಪಂಚದಾದ್ಯಂತ ಆರ್ಥಿಕ ಕುಸಿತ ಆದಾಗ ಭಾರತದ ಮೇಲೂ ಕೂಡ ಪರಿಣಾಮವಾಯಿತು. ರಾಜ್ಯಸರ್ಕಾರದ ಮೇಲೆ ಕೂಡ ಪರಿಣಾಮ ಬೀರಿತು. ಇವತ್ತು ಜನಸಾಮಾನ್ಯರಿಗೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಕಷ್ಟವಾಗಿದೆ. ಯಾವುದನ್ನೇ ಕೊಳ್ಳಬೇಕಾದರೂ ಕೂಡ ಅತ್ಯಂತ ಕಷ್ಟವಾಗಿರುವ ಸಂದರ್ಭವಿದೆ. ಇವತ್ತು ನಾವು ಬಹಳಷ್ಟು ಜನ ಹಳ್ಳಿಯಿಂದ ಬಂದಿರತಕ್ಕಂಥವರು ಇದ್ದೇವೆ. ಇವತ್ತು ಅರೆಹೊಟ್ಟೆಯಲ್ಲಿ ಬದುಕುವ ರೀತಿಯಲ್ಲಿ ಜನ ಇರಬೇಕಾದಾಗ ನಿಮ್ಮ ಆದ್ಯತೆ ಯಾವುದಕ್ಕೆ ಇರಬೇಕಾಗಿತ್ತು? ನಮ್ಮ ಪ್ರಣಾಳಿಕೆಯನ್ನು, ನಾವು ಐದು ವರ್ಷಗಳಿಗೆ ಕೊಟ್ಟಿದ್ದೇವೆ, ಐದು ವರ್ಷಗಳಲ್ಲಿ ನಾವು ಯಾವಾಗ ಬೇಕಾದರೂ ಮಾಡುತ್ತೇವೆ ಎಂದು ನೀವು ಹೇಳಬಹುದು. ಅದಲ್ಲ ಮುಖ್ಯ. ಜನ ಏನು ನಿರೀಕ್ಷೆ ಮಾಡಿದ್ದರೋ, ಆ ನಿರೀಕ್ಷೆಗೆ ಯಾವ ಕಾರ್ಯಕ್ರಮವನ್ನು ಆದ್ಯತೆ ಮೇಲೆ ಹಾಕಿಕೊಂಡಿದ್ದೀರಿ? ಎನ್ನುವುದರೆ ಬಗ್ಗೆ ತಾವು ಚಿಂತನೆ ಮಾಡಿಲ್ಲ. ನಿಮ್ಮ ಒಂದು ಮಾತು ಎಲ್ಲರಿಗೂ ಕೂಡ ಬಹಳ ಮೆಚ್ಚುಗೆ ಆಗಿದ್ದು ಎಂದರೆ, ಬಿಜೆಪಿಗೆ ವಿರುದ್ಧ ಇದ್ದಂಥವರು ಕೂಡ ಇವತ್ತು ಮೆಚ್ಚಬಹುದಾದ ಕೆಲವು ಮಾತುಗಳು ಎಂದರೆ, ನಮ್ಮ ಹಳ್ಳಿಯಲ್ಲಿ ಇವತ್ತು ನೀವು income level ಅನ್ನು 30 ಸಾವಿರ ರೂ.ಗೆ ಏರಿಸುತ್ತೇವೆಂದು ಹೇಳಿದ್ದೀರಲ್ಲಾ, ಅದನ್ನು ಜನ ನಂಬಿದರು. ಇವತ್ತು ಬೆಳಗ್ಗೆ ಆಹಾರ ಸಚಿವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ ಎಲ್ಲರೂ ಕೂಡ ಪಕ್ಷಾತೀತವಾಗಿ ಕಾರ್ಡ್‌ಗಳ ಬಗ್ಗೆ ಮಾತನಾಡಿದೆವು, ಪಡಿತರ ವ್ಯವಸ್ಥೆ ಬಗ್ಗೆ ಮಾತನಾಡಿದೆವು. ಜನಗಳ ಭಾವನೆಯನ್ನು ವ್ಯಕ್ತಮಾಡಿದಿರಿ. ಏಕೆ? ಇವತ್ತು ಮಾಧ್ಯಮದಲ್ಲಿ ಏನಾಗುತ್ತಿದೆ? ತಾವು ನೋಡುತ್ತಿದ್ದೀರಿ. ಇವತ್ತು ಸಾಲು ಸಾಲಾಗಿ ಜನ ನೆಮ್ಮದಿ ಕೇಂದ್ರದಲ್ಲಿ ನಿಂತಿದ್ದಾರೆ. ನೆಮ್ಮದಿ ಕೇಂದ್ರಗಳು ಯಾವ ರೀತಿಯಾಗಿವೆ ಎಂದರೆ ನಮ್ಮ ದಕ್ಷಿಣ ಕರ್ನಾಟಕದಲ್ಲಿ ಒಂದು ತಾಲ್ಲೂಕಿಗೆ 5-6 ಹೋಬಳಿಗಳು ಬರುತ್ತವೆ. ಅಲ್ಲಿ ನಡೆಯುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ತಾಲ್ಲೂಕಿಗೆ ಎರಡೇ ಹೋಬಳಿ ಇರುವುದು. ಎರಡು ಹೋಬಳಿಗಳಲ್ಲಿ

ಒಂದೇ ತಾಲ್ಲೂಕಿನಲ್ಲಿ ಒಂದರಿಂದ ಇನ್ನೊಂದು ಹೋಬಳಿಗೆ ಹೋಗಬೇಕಾದರೆ 80-100ಕಿ.ಮೀ. ದೂರ ಹೋಗಬೇಕಾಗುತ್ತದೆ. ಆ ನೆಮ್ಮದಿ ಕೇಂದ್ರಕ್ಕೆ ಜನರು ಬರಬೇಕೆಂದರೆ, ಕುಂಟರು, ಕುರುಡರು, ವಿಧವೆಯರು, ಹೆಂಗಸರು, ವಯಸ್ಸಾದವರನ್ನು ಯಾರು ಕರೆದುಕೊಂಡು ಬರುತ್ತಾರೆ? ಹೇಗೆ ಬರುತ್ತಾರೆನ್ನುವುದನ್ನು ಯೋಚನೆ ಮಾಡಬೇಕು. ಮತ್ತೆ ಏಕೆ ಜನ ಮುಗಿಬೀಳುತ್ತಿದ್ದಾರೆಂದರೆ, ಅರೆಹೊಟ್ಟೆಯಲ್ಲಿ ಬದುಕುವ ಪರಿಸ್ಥಿತಿ ಜನರಿಗಾಗಿದೆ. ಇವತ್ತು ಅಕ್ಕಿಯನ್ನು ಕೊಂಡು ತಿನ್ನುವ ಪರಿಸ್ಥಿತಿಯಲ್ಲಿ ಜನರಿಲ್ಲ. ಕೆ.ಜಿ. ಅಕ್ಕಿಗೆ 35-38 ರೂ. ಆಗಿದೆ. ಯಾರ ಕೈಯಲ್ಲಿ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಆ ಕಾರಣಕ್ಕೋಸ್ಕರ ಇವತ್ತು ಜನ ಕಾರ್ಡ್‌ಗೋಸ್ಕರ ಮುಗಿ ಬೀಳುತ್ತಿದ್ದಾರೆ. ಆ ಕಾರ್ಡ್‌ನ್ನು ನಿಜವಾಗಿಯೂ ಕೊಟ್ಟಿದ್ದರೆ ಜನ ಇವತ್ತು ಮೆಚ್ಚುತ್ತಿದ್ದರು. ಇದಕ್ಕೆ ನೀವು ಆದ್ಯತೆ ಕೊಟ್ಟು ಪಡಿತರ ವ್ಯವಸ್ಥೆಯನ್ನು ಸರಿಪಡಿಸಿ, ತಾವು ಆಶ್ವಾಸನೆ ಕೊಟ್ಟ ರೀತಿಯಲ್ಲಿ ಎರಡು ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಟ್ಟಿದ್ದೇ ಆಗಿದ್ದರೆ, ಬಹುಶ: ಜನರು ಮನ್ನಣೆ ಕೊಟ್ಟಿದ್ದಕ್ಕೆ ನೀವು ಋಣ ತೀರಿಸಿದಂತೆ ಆಗುತ್ತಿತ್ತು. ಆದರೆ, ಆ ಕೆಲಸ ವಾಗಲಿಲ್ಲ. ಆ ಕೆಲಸವಾಗಲಿಲ್ಲವೆಂದಾಗ, ಯಾವ ರೀತಿಯಲ್ಲಿ ಮುಂದುವರಿಯಬೇಕೆಂದು ತಾವು ಯೋಚನೆ ಮಾಡಿ. ತಾವು ಈಗಾಗಲೇ ನನ್ನ ಗಮನ ಅಭಿವೃದ್ಧಿಯ ಕಡೆಗೆ ಎಂದು ಮಾತನಾಡಿದಿರಿ, ನನಗೆ ಸ್ಥಿರತೆ ಬಂತು ಎಂದು ಹೇಳಿದಿರಿ. ಸಂತೋಷ. ಅಭಿವೃದ್ಧಿಯ ಕಡೆಗೆ ಹೋಗಬೇಕಾಗುತ್ತದೆ. ಏಕೆಂದರೆ, ನಿಮ್ಮ ಹೋರಾಟದ ದಿನಗಳನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ತಾವು 1983ರಲ್ಲಿ ವಿಧಾನಸಭೆಯನ್ನು ಪ್ರವೇಶ ಮಾಡುವಾಗ ಬಿಜೆಪಿ ಒಂದು ಸಣ್ಣ ಪಕ್ಷವಾಗಿತ್ತು. ತಾವು, ತಮ್ಮ ಸ್ನೇಹಿತರ ನಿರಂತರ ಹೋರಾಟದಿಂದಾಗಿ ಇವತ್ತು ಆಡಳಿತದ ಚುಕ್ಕಾಣಿಯನ್ನು ಹಿಡಿಯುವ ಮಟ್ಟಕ್ಕೆ ಹೋಗಿರುವುದು ಅದೊಂದು ಸಾಧನೆಯೇ ಆಗಿದೆ. ಆದರೆ, ಸಾಧನೆ ಎನ್ನುವುದಕ್ಕಿಂತ ಹೆಚ್ಚಾಗಿ ತಮ್ಮ ಜವಾಬ್ದಾರಿ ಹೆಚ್ಚಿದೆ ಎನ್ನುವುದನ್ನು ಮರೆಯಬಾರದು. ನಿಮ್ಮ ಜವಾಬ್ದಾರಿಯನ್ನು ನೀವು ನಿರ್ವಹಿಸಬೇಕಾದಾಗ ನೀವು ಜನರಿಗೆ ಕೊಟ್ಟ ಮಾತುಗಳನ್ನು ನೆರವೇರಿಸುವ ಕೆಲಸ ಮಾಡಬೇಕಾಗಿತ್ತು. ಇವತ್ತು ಅತ್ಯಂತ ಸಂಕಷ್ಟದಲ್ಲಿರತಕ್ಕಂತಹ ಜನರಿಗೆ ಯಾವ ರೀತಿಯಾಗಿ ಸಾಂತ್ವನ ಮಾಡುತ್ತೀರಿ? ನಾವು ರಾಜಕಾರಣವನ್ನು ಮರೆಯೋಣ. ನಾವು ಅಭಿವೃದ್ಧಿ ಕಡೆಗೆ ಹೋಗೋಣ. ಅಭಿವೃದ್ಧಿಯ ಕಡೆಗೆ ಹೋಗಬೇಕಾದಾಗ ನೀವು ಹೋಗುವ ದಾರಿ ಸರಿ ಇದೆಯೇ, ಇಲ್ಲವೇ ಎನ್ನುವುದರ ಬಗ್ಗೆ ಎಚ್ಚರಿಸುವ ಜವಾಬ್ದಾರಿ ಇವತ್ತು ವಿರೋಧ ಪಕ್ಷದ ಮೇಲಿದೆ, ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಕ್ಕೆ

ಇಚ್ಛೆಪಡುತ್ತೇವೆ. ನಾನಿವತ್ತು ಬೆಳಗ್ಗೆ ರಾಜ್ಯಪಾಲರು ಓದಿದ ಭಾಷಣವನ್ನು ಓದಿದೆ. ಭದ್ರ ಬುನಾದಿಯ ಮೇಲೆ ಅಭಿವೃದ್ಧಿಯ ಸೌಧ ಎಂದು ಹೇಳಿದ್ದೀರಿ. ಒಳ್ಳೆಯ ಮಾತುಗಳನ್ನು ಹೇಳಿದ್ದೀರಿ. ನಾನು ಅದರ ಬಗ್ಗೆ ಮೆಚ್ಚುಗೆಯಿಂದ ಹೇಳುತ್ತೇನೆ. (ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು) ಆದರೆ, ಬಹುಶ: ನೀವು ಇವತ್ತು ಕೇವಲ ಯಡಿಯೂರಪ್ಪನವರಾಗಿ ಉಳಿದಿಲ್ಲ, ಡಾ॥ ಯಡಿಯೂರಪ್ಪನವರಾಗಿದ್ದೀರಿ. ನನಗೆ ಡಾ॥ ಯಡಿಯೂರಪ್ಪ ಎಂದು ಹೇಳಿದಾಗ ನಿಮ್ಮ ಮೇಲೆ ನಾನಾ ರೀತಿಯಾಗಿರುವ ಒತ್ತಡ ತಮ್ಮ ಮೇಲಿದೆ ಎನ್ನುವುದನ್ನು ಮರೆಯಬಾರದು. ನಿಮಗೆ ಬುದ್ಧಿವಂತಿಕೆ ಇದೆ. ನಾನು ಬೆಳಿಗ್ಗೆ ಯಾವುದೋ ಒಂದು ಕಾರ್ಟೂನ್ ನೋಡುತ್ತಿದ್ದೆ. ಅದರಲ್ಲಿ ಡಾ॥ ಯಡಿಯೂರಪ್ಪ ಎಂದು ಹಾಕಿದ್ದಾಗ ಯಾರೋ ಒಬ್ಬ ಚಿಕ್ಕ ಹುಡುಗ ಹೋಗಿ ಅವರ ಹೆಸರಿನ ಮುಂದೆ ಎಂ.ಎಸ್. ಎಂದು ಬರೆಯುವುದನ್ನು ತೋರಿಸಿದ್ದಾರೆ. ಎಂ.ಎಸ್. ಅಂದರೆ Master of Surgery ಎಂದಾಗುತ್ತದೆ. ಅಂದರೆ, ಯಾವುದೇ ರೀತಿಯಲ್ಲಾದರೂ ಕೂಡ ಅಧಿಕಾರದ ಚುಕ್ಕಾಣಿಯನ್ನು ಉಳಿಸುವ ಕೆಲಸವನ್ನು ನೀವು ಮಾಡಿದ್ದೀರಿ. ಆದರೆ, ನೀವೀಗ ಜನತೆಗೆ ಉತ್ತರವನ್ನು ಕೊಡಬೇಕಾಗುತ್ತದೆ. ಜನರ ಸಹಾಯಕ್ಕೆ ನೀವು ಬರಬೇಕಾಗುತ್ತದೆ. ನೀವು ಮೊದಲನೆಯದಾಗಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ. ರೈತರ ಹೋರಾಟದ ಹಿನ್ನೆಲೆಯಲ್ಲಿ ನೀವು ಬಂದಿರುವವರಾಗಿದ್ದೀರಿ. ರೈತರ ಬಗ್ಗೆ ಯಾವಾಗಲೂ ಕೂಡ ಪಕ್ಷಪಾತಿಯಾಗಿದ್ದಂತಹ ತಾವು, ತಮಗೆ ಏನಾಯಿತೋ ಗೊತ್ತಿಲ್ಲ. ಪ್ರಥಮವಾಗಿ ತಮಗೆ, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ ನೀವು ಕೃಷಿ ಖಾತೆಯನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಳ್ಳಿ ಎಂದು ಹೇಳಿದ್ದೆವು. ಬಹುಶ: ನೀವೇನಾದರೂ ಕೃಷಿ ಖಾತೆಯನ್ನು ನಿಮ್ಮ ಬಳಿಯೇ ಇಟ್ಟುಕೊಂಡಿದ್ದರೆ, ನೀವು ಇತಿಹಾಸದಲ್ಲಿ ಸೇರುತ್ತಿದ್ದಿರಿ. ತಾವು ಬಂದಾಗ ಏನಾಯಿತು? ಅಧಿಕಾರ ಸ್ವೀಕಾರ ಮಾಡಿದ ಕೆಲವೇ ದಿವಸಗಳಲ್ಲಿ ಗೊಬ್ಬರಕ್ಕೋಸ್ಕರ ಬಂದ ರೈತರಿಗೆ ನೀವೇನು ಮಾಡಿದಿರಿ? ಆ ರೈತರಿಗೆ ಗುಂಡು ಹಾಕುವ ಪರಿಸ್ಥಿತಿ ಬಂತು. ನಾವು ಆ ವಿಷಯವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿದಾಗ, ನಾನು ಸಾರಿ ಸಾರಿ ಹೇಳಿದೆ, ಬೇಕಾದರೆ ಆ ಕಡತವನ್ನು ತೆಗೆದು ನೋಡಿ, Marketing Federation ಗೆ ಹಣ ಕೊಡಿ, ಕೇಂದ್ರ ಸರ್ಕಾರ ಹೆಚ್ಚಿಗೆ ರಸಗೊಬ್ಬರ ಕೊಟ್ಟಿದೆ ಎಂದು, ಇಷ್ಟೆಲ್ಲಾ ಹೇಳಿದರೂ ಕೂಡ ಕೊನೆಗೂ ಕೂಡ ಮಾಡದೆ ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವ ಹಾಗೆ ಎಷ್ಟೋ

ದಿವಸಗಳಾದ ಮೇಲೆ ಹಣ ಕೊಡುವ ಕೆಲಸ ಮಾಡಿದಿರಿ. ಆ ಕೆಲಸವನ್ನು ಮೊದಲೇ ಮಾಡಿದ್ದರೆ, ಬಹುಶ: ಈ ತೊಂದರೆಗಳು ಬರುತ್ತಿರಲಿಲ್ಲ, ಈ ಅಪವಾದ ನಿಮ್ಮ ಮೇಲೆ ಇರುತ್ತಿರಲಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರೈತರ ಬದುಕೇನಾಗಿದೆ? ರೈತ ಪರವಾದ ಬಜೆಟ್‌ನಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ.

ಗೊಬ್ಬರ, ಬೀಜವನ್ನು ತೆಗೆದುಕೊಳ್ಳಲು ಶಕ್ತಿ ಇಲ್ಲದಿರುವಂಥ ರೈತರಿಗೆ ಖುಷ್ಕಿ ಜಮೀನಿಗೆ ಒಬ್ಬ ಸಣ್ಣ ರೈತನಿಗೆ 1000 ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ. ನಾನು ರೈತರ ಸಮಸ್ಯೆಯನ್ನು ಹತ್ತಿರದಿಂದ ಬಲ್ಲವನಾಗಿ ಹೇಳುತ್ತೇನೆ. ಬಜೆಟ್‌ನಲ್ಲಿ ಬಂದಾಗ ಯಾರೂ ಏನೂ ಮಾತನಾಡುವುದಕ್ಕಾಗುವುದಿಲ್ಲ. ಬಜೆಟ್‌ನಲ್ಲಿ ಹೇಳಿರುವುದು ಎಷ್ಟರಮಟ್ಟಿಗೆ implement ಆಗುತ್ತದೆಂದು ನನಗೆ ಗೊತ್ತಿತ್ತು. ತಾವೇ, 500 ಕೋಟಿ. ರೂ.ಗಳಲ್ಲಿ 210 ಕೋಟಿ. ರೂ. ಮಾತ್ರ ಖರ್ಚಾಗಿದೆ ಎಂದು ಹೇಳಿದ್ದೀರಿ. 210 ಕೋಟಿ .ರೂ. ಬಿಡುಗಡೆಯಾಗಿದೆ. ಆದರೆ, 80-130 ಕೋಟಿ .ರೂ. ಗಳಿಗಿಂತ ಹೆಚ್ಚಿಗೆ ಖರ್ಚಾಗಿಲ್ಲ. ಆದರೆ, ನೀವು ಇಷ್ಟೇ ಹಣವನ್ನು ಬೇರೆ ಯಾವುದಾದರೂ ರೂಪದಲ್ಲಿ ಕೃಷಿಕರಿಗೆ ಕೊಟ್ಟಿದ್ದರೆ ಸಹಾಯವಾಗುತ್ತಿರಲಿಲ್ಲವೇ ಎನ್ನುವ ವಿಚಾರವನ್ನು ಯಾವ ಅಧಿಕಾರಿಗಳೂ ನಿಮಗೆ ಹೇಳಲಿಲ್ಲವೇ? ತಜ್ಞರು ನಿಮಗೆ ಹೇಳಲಿಲ್ಲವೇ? ಏಕೆ ಹೇಳಲಿಲ್ಲ? ಇವತ್ತು ರೈತರ ಪರಿಸ್ಥಿತಿ ಏನಾಗಿದೆ? ಅಕಾಲಿಕ ಮಳೆಯಾಗಿ ಬೆಳೆ ಹಾಳಾಗಿದೆ. ನಮ್ಮ ಭಾಗದಲ್ಲಿ ಏನಾಗಿದೆ ಎಂದು ಸುರೇಶ್‌ಕುಮಾರ್‌ರವರು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿರುವುದರಿಂದ ಅವರಿಗೆ ಗೊತ್ತಿದೆ. ಅವರು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಬೇಕು. ನನ್ನ ಹತ್ತಿರ ದಾಖಲೆಗಳಿವೆ. ಶೇಂಗಾ ಬೆಳೆ ಹಾಳಾಗಿದೆ. ಶೇಂಗಾ ಬೆಳೆ ಹಾಳಾಗಿರುವುದನ್ನು ನಾವು ತಹಶೀಲ್ದಾರ್‌ರಿಂದ ಹಿಡಿದು ಮುಖ್ಯಮಂತ್ರಿಯವರಿಗೂ ಮನವಿಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ಶೇ.80ರಷ್ಟು ಬೆಳೆ ನಷ್ಟವಾಯಿತು. ಒಂದೊಂದು ತಾಲ್ಲೂಕಿನಲ್ಲಿ 300-400 ಕೋಟಿ .ರೂ.ಗಳಷ್ಟು ರೈತರಿಗೆ ನಷ್ಟವಾಗಿದೆ. ಅಂಥದ್ದು ನಾಲ್ಕಾರು ತಾಲ್ಲೂಕುಗಳಿರಬಹುದು. ಆಗ ಕೃಷಿ ಮಂತ್ರಿಗಳು ಸಭೆ ಕರೆದಾಗ ನಾನು ಒಂದು ಸಲಹೆ ಮಾಡಿದೆ. ತಾವೂ ಕೂಡ ಆಶ್ವಾಸನೆ ಕೊಟ್ಟಿದ್ದಿರಿ. ಕೃಷಿ ಮಂತ್ರಿಗಳು ಸಭೆ ಕರೆದಾಗ, ಮಾನ್ಯ ಅಭಿವೃದ್ಧಿ ಆಯುಕ್ತರು, ಇದಕ್ಕೆ natural calamity ಯಲ್ಲಿ ಕೊಡುವುದಕ್ಕೆ ಬರುತ್ತದೆಂದು ಹೇಳಿದಾಗ ನಾವು ಸಂತೋಷಪಟ್ಟೆವು. ಆಗ ಮುಖ್ಯಮಂತ್ರಿಯವರ ಜೊತೆ ನಮ್ಮನ್ನು ಕರೆದುಕೊಂಡು

ಹೋಗಿ, ನಾವು ಯಾವ ರೀತಿಯಾದರೂ ಅವರನ್ನು convince ಮಾಡುತ್ತೇವೆಂದು ಹೇಳಿದೆವು. ಬಹುಶ: ಯಾವ ಮಂತ್ರಿಗಳೂ ಕೂಡ ಅದರ ಬಗ್ಗೆ ಆಸಕ್ತಿವಹಿಸಲಿಲ್ಲ. ನಾವು ಏನೆಲ್ಲ ಮನವಿ ಗಳನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟೆವು, ಮಾಧ್ಯಮದ ಮೂಲಕ ಏನೆಲ್ಲ ಮನವಿ ಮಾಡಬೇಕಾಗಿತ್ತೋ ಅದನ್ನು ಮಾಡಿದೆವು. ಆದರೆ, ಏನಾಯಿತು? ಇವತ್ತು 300-400 ಕೋಟಿ .ರೂ. ನಷ್ಟವಾಗಿರುವ ರೈತ ಯಾವ ರೀತಿಯಾಗಿ ಬದುಕಬೇಕು? ತಿಪ್ಪೇಸ್ವಾಮಿಯವರು ಮಾತನಾಡುವಾಗ, ಎಲ್ಲರೂ ಕೂಡ ಬೆನ್ನುತಟ್ಟಿದರು. ಸ್ವಾಮಿ ತಮ್ಮ ಕ್ಷೇತ್ರದಲ್ಲಿ ಏನಾಗಿದೆ ನೋಡಿ? ಇವತ್ತು ಶೇಂಗಾ ಬೆಳೆ ಹಾಳಾಗಿ ರೈತರು ಏನಾಗಿದ್ದಾರೆ? ಅವರನ್ನು ಬದುಕಿಸುವುದಕ್ಕೆ ಸಾಧ್ಯವಿರಲಿಲ್ಲವೇ? ನಾವೇನೂ ಕೇಳಿಲಿಲ್ಲ. ತಿಪ್ಪೇಸ್ವಾಮಿಯವರ ಕ್ಷೇತ್ರವಿರಬಹುದು, ನನ್ನ ಕ್ಷೇತ್ರವಿರಬಹುದು, ವೆಂಕಟರಮಣಪ್ಪನವರ ಕ್ಷೇತ್ರವಿರಬಹುದು, ಇವೆಲ್ಲ ಆಂಧ್ರಗಡಿಯಲ್ಲಿ ಬರುವ ಕ್ಷೇತ್ರಗಳು. ಅಲ್ಲೇನಾಗಿದೆ? ಇದೇ ರೀತಿಯ natural calamity ಅಡಿಯಲ್ಲಿ ಒಂದು ಹೆಕ್ಟೇರ್‌ಗೆ 4800 ರೂ.ಗಳನ್ನು ಆಂಧ್ರಪ್ರದೇಶದಲ್ಲಿ ಕೊಡುತ್ತಿದ್ದಾರೆ. ನಾವು 65 ಕಿ.ಮೀ. ಗಡಿ ಭಾಗದಲ್ಲಿ ಬರುವವರು. ಭೂಮಿ ಅಲ್ಲೂ, ಇಲ್ಲೂ ಇದೆ. ಅಂಥವರಿಗೆ ಅಲ್ಲಿ ಒಂದು ಹೆಕ್ಟೇರ್‌ಗೆ 4,800 ರೂ. ಕೊಡುತ್ತಿದ್ದಾರೆಂದು ಹೇಳಿದರು. ಅದರ ಸರ್ಕಾರಿ ಆದೇಶವನ್ನು ನಾನು ತಂದು ಕೊಟ್ಟೆ. ಆ ರಾಜ್ಯದ ಮಂತ್ರಿಯವರೊಬ್ಬರ ಹತ್ತಿರ ಹೋಗಿ ಚರ್ಚೆ ಮಾಡಿ ಎಲ್ಲವನ್ನೂ ತಂದು ಕೊಟ್ಟೆ. ಆದರೆ, ಎಲ್ಲೋ ಒಂದು ಕಡೆಗೆ ಇಲ್ಲಿಯವರೆಗೆ ಆಗಲಿಲ್ಲ. ಇದೊಂದು ಕಡೆ. ಇನ್ನೊಂದು ಬಹಳ ಮುಖ್ಯವಾಗಿ, it is rejected ಎಂಬ ಅಭಿವೃದ್ಧಿ ಆಯುಕ್ತರ ಒಂದು ಹೇಳಿಕೆ ಬಂತು. ಒಂದು ಕಡೆ ಮಂತ್ರಿಗಳು, it is sanctioned ಎಂದು ಹೇಳಿದರು. ಒಂದು ಬಾರಿಯಲ್ಲ, 4 ಸಾರಿ statement ಕೊಟ್ಟರು. ಇದನ್ನು ಕೇಳಿ ಜನರು ಬಹಳ ಖುಷಿಪಟ್ಟರು. ಜನ ಪ್ರಯತ್ನಪಟ್ಟಿದ್ದಕ್ಕೆ, ಬೆಳೆ ನಷ್ಟವಾಗಿದ್ದಕ್ಕೆ ಏನಾದರೂ ಕೊಡುವಂಥ ಮಟ್ಟಕ್ಕೆ ಬಂದರಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ, rejected ಎಂದು ಬಂದ ಮೇಲೆ ಜನರಿಗೆ ಯಾವ ರೀತಿಯಲ್ಲಿ ಸಾಂತ್ವನ ಮಾಡುತ್ತೀರಿ? ಇದೊಂದು ಕಡೆಯಾಯಿತು. ಇನ್ನೊಂದು ಕಡೆ, ಗುಲಬರ್ಗಾದಲ್ಲಿ ತೊಗರಿ ಬೆಳೆ ಬೆಳೆಯುವ, ಈರುಳ್ಳಿ ಬೆಳೆಯುವ ರೈತರಿಗೆ ಇವತ್ತು ನಷ್ಟವಾಗಿದೆ. ಆ ರೀತಿ ನಷ್ಟವಾಗಿರುವಾಗ, ಅಧಿಕಾರಿಗಳು, ನಮ್ಮ ಹತ್ತಿರ ಹಣವೆಲ್ಲಿದೆ, ನಾವು ಯಾವ ರೀತಿ ತುಂಬಿಕೊಡಬಹುದು ಎಂದು ಹೇಳಬಹುದು. ದಯಮಾಡಿ, ಕೃಷಿ ವಿಷಯ ಬಂದಾಗ, ಅಧಿಕಾರಿಗಳ ಮಾತನ್ನು

ತಾವು ಕೇಳಬೇಡಿ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲದರಲ್ಲೂ ಅಧಿಕಾರಿಗಳ ಮಾತು ಕೇಳಿದಾಗ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಇವತ್ತು ನಮ್ಮ ಕರ್ನಾಟಕದಲ್ಲೇನಾಗಿದೆ? ಆಹಾರೋತ್ಪಾದನೆ ಬಗ್ಗೆ ನೀವೇನು anticipate ಮಾಡಿದ್ದೀರಿ ಅದನ್ನು ಇವತ್ತು ನೀವು ಯಾವುದೇ ಸಂದರ್ಭಧಲ್ಲಿ achieve ಮಾಡುವುದಕ್ಕೆ ಸಾಧ್ಯವಿಲ್ಲ. ಅಂದಾಗ ಇವತ್ತು ಆರ್ಥಿಕ ಕುಸಿತದಿಂದ ಅಮೇರಿಕ ದೇಶವೇನಾಗಿದೆ? ರಷ್ಯಾ ದೇಶವೇನಾಗಿದೆ? ಯಾವಾಗ ಕೃಷಿ, ಉತ್ಪಾದನೆಗೆ ಆಸಕ್ತಿ ಕಡಿಮೆಯಾಯಿತೋ, ಆ ದೇಶಗಳು collapse ಆದವು. I.T. Company ಗಳು ಮುಳುಗಿ ಹೋದವು. ಆದರೆ, ಇಷ್ಟೆಲ್ಲಾ ಆದಾಗ್ಯೂ ಕೂಡ, ನಾವೆಲ್ಲೋ ಒಂದು ಕಡೆಗೆ, ಭಾರತ ದೇಶದವರಾದ ನಾವು ಬೆನ್ನು ತಟ್ಟಿಕೊಳ್ಳುತ್ತಿದ್ದೆವು, ಬಹಳ ಸಮಾಧಾನದಿಂದ ಹೇಳುತ್ತಿದ್ದೆವು, ನಮಗೆ ಆರ್ಥಿಕ ಕುಸಿತದಿಂದ ಅಷ್ಟಾಗಿ ತೊಂದರೆಯಾಗಿಲ್ಲ ಎನ್ನುವ ಮಾತನ್ನು ನಾವು ಹೇಳುತ್ತಿದ್ದೇವು. ಕಾರಣ ಏನೆಂದರೆ, ನಾವಿನ್ನೂ ಕೂಡ ಕೃಷಿಯನ್ನು ನಂಬಿರುವವರು. ನಮ್ಮ GDP 4% ವರೆಗೆ ಇದೆ. ಅದು ಕಡಿಮೆಯಾಗುತ್ತಿದೆ. ಇವತ್ತು ನಮ್ಮ ಉತ್ಪಾದನೆ stagnation ಆಗುತ್ತಿದೆ. ಆ stagnation ನಿಂದ ಹೊರಬರಬೇಕಾದಾಗ, ನೀವು ಕೃಷಿಗೆ ಪೂರಕವಾದ, ಕೃಷಿ ಪರವಾದ, ಚಿಂತನೆಮಾಡಬೇಕಾಗುತ್ತದೆ. ಇವತ್ತು ಆ ರೀತಿ ಚಿಂತನೆಯನ್ನು ಮಾಡಿದಾಗ ಮಾತ್ರ ಕೃಷಿ ವಿಚಾರದಲ್ಲಿ ಸಫಲರಾದಾಗ ಮಾತ್ರ ನೀವು ಉದ್ಯೋಗವನ್ನು ಕೊಡುವುದಕ್ಕಾಗುತ್ತದೆ. ಇವತ್ತು Satyam Company ಮುಳುಗಿ ಹೋಯಿತು. 43,000-53,000 ಜನ ನೌಕರರು ಇದ್ದಾರೆಯೋ ಏನೋ ಗೊತ್ತಿಲ್ಲ, ಅವರು ಬೀದಿಗೆ ಬರುವ ಸಂದರ್ಭ ಬಂತು. ಆದರೆ, ರೈತ ಇವತ್ತೂ ಸಹ ಒಂದು ತಾಲ್ಲೂಕನ್ನು ತೆಗೆದುಕೊಳ್ಳುವುದಾದರೆ, ಸಾವಿರಾರು ಜನ ಕೃಷಿಯನ್ನೇ ನಂಬಿರುವವರಿದ್ದಾರೆ. ಬೆಳೆ ಹಾಳಾದರೂ ಕೂಲಿ ಮಾಡಿಯಾದರೂ ಜೀವಿಸುತ್ತಾರೆ ಅಥವಾ ಇನ್ನೊಂದು ರೀತಿಯಲ್ಲಿ ಜೀವನ ಮಾಡುತ್ತಾರೆ. ಆದರೆ, ಅವರು ಬೀದಿಗೆ ಬರುವುದಿಲ್ಲ. ಇವತ್ತು ನಾವು ಯೋಚನೆ ಮಾಡಬೇಕು, ಈ ದೇಶದಲ್ಲಿ ಕೃಷಿ ಉಳಿದರೆ ಮಾತ್ರ ದೇಶ ಉಳಿಯಿತು, ಆಗ ಮಾತ್ರ ಉದ್ಯೋಗ ಕೊಡುವುದಕ್ಕೆ ಸಾಧ್ಯ. ಇವತ್ತು ಎಲ್ಲ ಕಡೆ ಮಾಹಿತಿ ತಂತ್ರಜ್ಞಾನ ಇತ್ಯಾದಿ ಇದೆ. ಅದನ್ನು ನಾನು ಬೇಡವೆಂದು ಹೇಳುತ್ತಿಲ್ಲ. ಆದರೆ, ಅದೂ ಬೇಕು. ಅಷ್ಟೇ ಪ್ರಮಾಣದಲ್ಲಿ ಕೃಷಿಗೂ ಆದ್ಯತೆ ಕೊಡಬೇಕು, neglect ಮಾಡಬಾರದು. ನೀವು ಆಗ ಸರ್ಕಾರ ನಡೆಸಿದ್ದೀರಿ ಎಂದು ಕೇಳಬಹುದು. ನಾವು 500 ಕೋಟಿ .ರೂ. ಕೊಟ್ಟಿದ್ದೇವೆಂದು ಹೇಳಿದಿರಿ.

ಆ ಹಣದಲ್ಲಿ ಏನಾಗುತ್ತದೆ? ಆ ಹಣದಲ್ಲಿ ಮಾರ್ಚ್‌ಗೆ 200 ಕೋಟಿ .ರೂ. ಖರ್ಚಾಗುತ್ತದೋ, ಇಲ್ಲವೋ ಅದು ಬೇರೆ. ಆದರೆ, 1,000 ರೂ.ಗೆ 500 ರೂ. ಖರ್ಚು ಮಾಡುತ್ತಾರೆ. ಬ್ಯಾಂಕ್‌ನಲ್ಲಿ 500 ರೂ. ಹಿಡಿದುಕೊಳ್ಳುತ್ತಾರೆ. ಅದನ್ನೆಲ್ಲ ರೆಕಾರ್ಡ್ ಮಾಡುವುದಕ್ಕೆ 200 ರೂ. ಖರ್ಚಾಗುತ್ತದೆ. ಉಳಿದ 200 ರೂ. ಬರುತ್ತದೆ. ಇದರಿಂದ ಸಮಸ್ಯೆ ಬಗೆಹರಿಯುತ್ತದೆಯೇ? ನೀವು ಅದೇ 500 ಕೋಟಿ ರೂ.ಗಳನ್ನು ಬೀಜ ಉತ್ಪಾದನೆಗೋಸ್ಕರ ಕೊಡಬಹುದಿತ್ತು. ಇವತ್ತು ಕೃಷಿ ಉತ್ಪನ್ನ ಜಾಸ್ತಿಯಾಗಬೇಕೆನ್ನುವುದಾದರೆ ಗೊಬ್ಬರವನ್ನು, ಒಳ್ಳೆಯ ಬೀಜವನ್ನು ಕೊಡುವ ಮೂಲಕ ಕನಿಷ್ಠ 20-30% ಕೃಷಿ ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕಾಗುತ್ತದೆ. ನೀವು ಅದನ್ನು ಮಾಡುವುದು ಬಿಟ್ಟು University open ಮಾಡುವುದಕ್ಕೆ ಹೊರಟಿದ್ದೀರಿ. University ಗಳಿಗೆ ಕೆಲಸವೇನಿದೆ? ಆ University ಗಳಿಗೆ ಕೊಟ್ಟು foundation seed ಕೊಟ್ಟು develop ಮಾಡಿ ರೈತರ ಮನೆ ಮನೆಗೆ ಕೊಟ್ಟು, ಪ್ರಗತಿಪರವಾದ ರೈತರಿಗೆ ಆ ಬೀಜವನ್ನು ಕೊಡಬೇಕು. ಆ ಬೀಜವನ್ನು ಉತ್ಪಾದನೆ ಮಾಡಿ, ಇವತ್ತು ನಾವು ರೈತರಿಗೆ ಯಾವ subsidy ಯನ್ನೂ ಕೊಡಬೇಕಾಗಿಲ್ಲ, ರೈತ ಭಿಕ್ಷುಕನಲ್ಲ. ಅವನು ಯಾವತ್ತೂ ಬೀಜಕ್ಕೋಸ್ಕರ ಬಂದು ನಿಲ್ಲುವುದಿಲ್ಲ. ಅವನಿಗೆ ಒಂದೇ ಗುರಿ ಇರುತ್ತದೆ. ಮಳೆ ಬರುವುದನ್ನು ನೋಡುತ್ತಾನೆ. ನಮ್ಮ Meteorological Department ಅನ್ನು ಕೇಳುವುದಿಲ್ಲ, ಪತ್ರಿಕೆಯಲ್ಲಿ ಏನು ಬರುತ್ತದೆಂದು ಓದುವುದಕ್ಕೆ ಹೋಗುವುದಿಲ್ಲ. ಅವನಿಗೆ ಗೊತ್ತಿರುತ್ತದೆ. ಮುಂಗಾರು ಮಳೆ ಬರಬೇಕಾದಾಗ ಯಾವ ಕಡೆಯಿಂದ ಗಾಳಿ ಬರುತ್ತದೆ, ಕಾಗೆ ಯಾವ ಕಡೆಗೆ ಹೋಗುತ್ತದೆ ಎನ್ನುವ ಪರಿಕಲ್ಪನೆ ಅವನಿಗಿದೆ. ಅವನಿಗಿರುವ ಸಾವಿರಾರು ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಮಳೆ ಬಂದ ತಕ್ಷಣ ಯಾವ ಕೃಷಿ ಇಲಾಖೆಯವರನ್ನೂ ಕೇಳದೆ ಯಾವ ಬೀಜ ಇರುತ್ತದೋ ಆ ಬೀಜವನ್ನು ತೆಗೆದುಕೊಂಡು ಬಿತ್ತುತ್ತಾನೆ. ಅದು ಹುಟ್ಟುತ್ತದೋ, ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ಆ ಕೆಲಸ ಮಾಡಿ ಮುಗಿಸುತ್ತಾನೆ. ಆದರೆ, ಬೀಜವನ್ನು ಸರಿಯಾಗಿ ಅವನ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಬೇಕಾದಾಗ ನಾವು subsidy ಕೊಡುವುದರಿಂದ ಕೆಲವೇ ಕಂಪನಿಗೆ ಸಹಾಯವಾಗುತ್ತದೆಯೇ ವಿನ: ರೈತರಿಗೆ ಸಹಾಯವಾಗುವುದಿಲ್ಲ. ಇವತ್ತು village concept ಇಟ್ಟುಕೊಂಡು, ಹಳ್ಳಿಗಳಲ್ಲಿ ಬೀಜದ ಉತ್ಪಾದನೆ ಮಾಡುವ ಪರಿಕಲ್ಪನೆಗೆ ನೀವು ಬಹುಶ: 500 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೆ ಇವತ್ತು ರೈತರು ಧನ್ಯರಾಗುತ್ತಿದ್ದರು. ಅದು ಏಕೆ ಆ

ರೀತಿ ನಿಮಗೆ ಚಿಂತನೆ ಬರಲಿಲ್ಲ? ಅದರ ಬಗ್ಗೆ ನಿಮಗೆ ಏಕೆ ಯಾರೂ ಹೇಳಲಿಲ್ಲ? ಅದೇನಾದರೂ ಒಂದು ಕಡೆ ಇರಲಿ. ಇನ್ನೊಂದು ಬಹಳ ಮುಖ್ಯವಾಗಿರುವುದೆಂದರೆ, ನಮ್ಮ ನಾಡಿನ ರೈತರಿಗೆ ಸಹಾಯವಾಗಬೇಕೆನ್ನುವುದಾದರೆ, ಮುಂದಿನ ದಿನಗಳಲ್ಲಿ ಹೆಚ್ಚು ಹೆಚ್ಚು ಸಾಲ ಕೊಡಿಸುವುದಕ್ಕೆ ಪ್ರಯತ್ನಪಡಬೇಕು. ಹೆಚ್ಚು ಹೆಚ್ಚು ಸಾಲ ಕೊಡುವ ಮೂಲಕ ಅದು ಸಹಕಾರಿ ಸಾಲವಿರಲಿ, ಬ್ಯಾಂಕ್ ಸಾಲವಿರಲಿ, ನೀವೊಂದು ಕಾರ್ಯಕ್ರಮ automatic ಆಗಿ ರೈತ insurance ಅಡಿಯಲ್ಲಿ ಬರುತ್ತಾನೆ. ನೂರಕ್ಕೆ 80-85ರಷ್ಟು ಸಾಲ ಕೊಡಿ. ಅದು insurance ವ್ಯಾಪ್ತಿಯಲ್ಲಿ ಬರುತ್ತದೆ. ಬೆಳೆ ನಷ್ಟವಾದ ಸಂದರ್ಭದಲ್ಲಿ ಅವನಿಗೆ automatic ಆಗಿ relief ಸಿಗುತ್ತದೆ. ಅಂಥ ಸಂದರ್ಭದಲ್ಲಿ premium ಜಾಸ್ತಿಯಾಗುತ್ತದೆ, premium ಕಟ್ಟುವುದಕ್ಕಾಗುವುದಿಲ್ಲ. Premium ಕಟ್ಟುವುದಕ್ಕಾಗುವುದಿಲ್ಲವೆಂದಾಗ ನೀವು 500 ಕೋಟಿ .ರೂ. ಕೊಡುವುದನ್ನು ಬಿಟ್ಟು premium ಅನ್ನು ಕಡಿಮೆ ಮಾಡಿಸಿ ಸರ್ಕಾರವೇ ಭರಿಸತಕ್ಕ ಕೆಲಸ ಮಾಡಿದರೆ ಬಹುಶ: ಇವತ್ತು ರೈತ ಬದುಕಿರುತ್ತಿದ್ದ. ಅದಾಗಲಿಲ್ಲ. ಇಂಥದ್ದರ ಬಗ್ಗೆ ಯೋಚನೆ ಮಾಡಬೇಕೇ ವಿನ: ನೇರವಾಗಿ ಹಣ ಕೊಡುವುದರಿಂದ ರೈತರಿಗೆ ಸಹಾಯವಾಗುವುದಿಲ್ಲ. ನೀವು 5,000 ರೂ. ಕೊಡಿ, 5 ದಿವಸಕ್ಕೆ ಅದನ್ನು ಖಾಲಿ ಮಾಡಿಬಿಡುತ್ತಾನೆ. ಕೋಳಿ ತಿನ್ನುತ್ತಾನೋ, ಕುರಿ ತಿನ್ನುತ್ತಾನೋ, ಒಟ್ಟಿನಲ್ಲಿ ಆ ಹಣವನ್ನು 5 ದಿವಸಗಳಲ್ಲಿ ಖಾಲಿ ಮಾಡುತ್ತಾನೆ.

ಅದರ ಬದಲು ಈ concept ಇಟ್ಟುಕೊಂಡು ಅದಕ್ಕೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ನೀವು ಯೋಚಿಸಿದ್ದರೆ ಬಹುಶ: ಅದು ಬಹಳ ಸಹಾಯ ವಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಮುಂದಿನ ದಿನಗಳಲ್ಲಾದರೂ ಇದಕ್ಕೆ ಒತ್ತನ್ನು ಕೊಡುವ ರೀತಿಯಲ್ಲಿ ತಾವು ಹೋಗಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ತಾವು ತಮ್ಮ ಭಾಷಣವನ್ನು ನಾಳೆ ಮುಂದುವರಿಸಿ. ಈಗ ಸದನವನ್ನು ನಾಳೆ ಬೆಳಿಗ್ಗೆ 10-30 ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 1 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 20 ನೇ ಜನವರಿ 2009 ರಂದು ಮಂಗಳವಾರ ಬೆಳಿಗ್ಗೆ 10-30ಕ್ಕೆ ಸೇರುವಂತೆ ನಿಶ್ಚಯಿಸಿತು)